ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

ಭಾರತೀಯ ಜನತಾ ಪಕ್ಷ (ಬಿಜೆಪಿ) ರಾಷ್ಟ್ರಾಧ್ಯಕ್ಷ ನಿತಿನ್ ನಬೀನ್ ಅವರು ತಮಿಳುನಾಡು ಬಿಜೆಪಿ ಘಟಕದ ಮುಖ್ಯಸ್ಥ ಕೆ.ಅಣ್ಣಾಮಲೈ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

06 ಜೂನ್, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 87 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಪರಿಸರ ದಿನದ ಪ್ರಲಾಪ ಗಳಿಗೆ ಕೊನೆ ಎಂದು? » 2

ಯುಜಿಡಿಗೆ 130 ಕೋ. ರೂ. ಅನುದಾನ ಅಗತ್ಯ » 3

ಪ್ರಧಾನಿ ಮೋದಿ ಹಾಡಿ ಹೊಗಳಿದ ಟ್ರಂಪ್ » 4

# ಖಾತೆ ಹಂಚಿಕೆ ಅಸಮಾಧಾನ ಸ್ಫೋಟ

## ಸಚಿವ ಸ್ಥಾನಕ್ಕೆ ರಾಮಲಿಂಗಾರೆಡ್ಡಿ ರಾಜೀನಾಮೆ | ಕೆ.ಹೆಚ್.ಮುನಿಯಪ್ಪ ಮನವೊಲಿಸಿದ ರಾಹುಲ್ ಗಾಂಧಿ

• ಪ್ರಜೋದಯ ವರದಿ

**ಬೆಂಗಳೂರು:** ಡಿ.ಕೆ.ಶಿವಕುಮಾರ್ ಅವರ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮೂರೇ ದಿನಕ್ಕೆ ಖಾತೆ ಹಂಚಿಕೆ ವಿಚಾರದಲ್ಲಿ ಅಸಮಾಧಾನ ಸ್ಫೋಟಗೊಂಡಿದೆ. ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡದಿದ್ದಕ್ಕೆ ರಾಮಲಿಂಗಾರೆಡ್ಡಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಅದರ ಬೆನ್ನಲ್ಲೇ ಈ ಹಿಂದೆ ನಿಭಾಯಿಸಿದ್ದ ಆಹಾರ ಇಲಾಖೆ ಜವಾಬ್ದಾರಿ ನೀಡಿದ್ದಕ್ಕೆ ಹಿರಿಯ ಸಚಿವ ಕೆ.ಹೆಚ್.ಮುನಿಯಪ್ಪ ಅವರು ಬಹಿರಂಗವಾಗಿಯೇ ಅಸಮಾಧಾನ ಹೊರ ಹಾಕಿದ್ದಾರೆ. ಖುದ್ದು ರಾಹುಲ್ ಗಾಂಧಿ ಬಳಿಯೇ ಅಸಮಾಧಾನ ತೋಡಿಕೊಂಡಿದ್ದು, ಈ ವೇಳೆ ರಾಹುಲ್ ಮಹತ್ವದ ಭರವಸೆ ನೀಡಿದ್ದರಿಂದ ಸಮಾಧಾನಗೊಂಡಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಪರೋಕ್ಷವಾಗಿ ಅಸಮಾಧಾನ ಹೊರ ಹಾಕಿದ್ದು, ತಮಗೆ ಸಂತೋಷವೂ ಇಲ್ಲ, ದುಃಖವೂ ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

**ಈ ಹಿಂದೆ ಭರವಸೆ ನೀಡಿದ್ದ ಡಿಕೆಶಿ**

ಈ ಹಿಂದೆ ಸಿದ್ದರಾಮಯ್ಯ ಅವರ ಸರ್ಕಾರ ರಚನೆ ಸಂದರ್ಭದಲ್ಲಿ ಹೈಕಮಾಂಡ್ ರಾಮ



ಲಿಂಗಾರೆಡ್ಡಿ ಅವರಿಗೆ ಬೆಂಗಳೂರು ನಗರಾಭಿವೃದ್ಧಿ ಖಾತೆ ನೀಡಲು ನಿರ್ಧರಿಸಿತ್ತು. ಆಗಿನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ರಾಮಲಿಂಗಾರೆಡ್ಡಿ ಅವರ ಮನವೊಲಿಸಿ ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನು ನಾನು ಪಡೆಯುತ್ತೇನೆ. ನಾನು ಮುಖ್ಯಮಂತ್ರಿಯಾದ ನಂತರ ಬೆಂಗಳೂರು ನಗರಾಭಿವೃದ್ಧಿ ಖಾತೆಯನ್ನು ನಿಮಗೆ ಕೊಡುತ್ತೇನೆಂದು ರಾಮಲಿಂಗಾರೆಡ್ಡಿ ಅವರಿಗೆ ಮಾತು ಕೊಟ್ಟಿದ್ದರು ಎನ್ನಲಾಗಿದೆ.

ಈ ಬಗ್ಗೆ ಸ್ವತಃ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿ, ರಾಮಲಿಂಗಾರೆಡ್ಡಿ ಅವರಿಗೆ ನಾವು ಮಾತು ಕೊಟ್ಟಿದ್ದು ನಿಜ. ನಾನು ನನ್ನ ತಮ್ಮ ಹೋಗಿ ಮಾತು ಕೊಟ್ಟಿದ್ದೇವು ಎಂದು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ.

ರಾಮಲಿಂಗಾರೆಡ್ಡಿ ಅವರು ಹಿರಿಯ ನಾಯಕರು. ನಾನು ಅವರಿಗೆ ಒಂದು ಖಾತೆ ನೀಡುವ ಬಗ್ಗೆ ಮಾತು ಕೊಟ್ಟಿದ್ದು ನಿಜ. ಆದರೆ, ಈಗ ಹೈಕಮಾಂಡ್ ತೀರ್ಮಾನದಂತೆ ಕೃಷ್ಣ ಬೈರೇಗೌಡ ಅವರಿಗೆ ಬೆಂಗಳೂರು ಅಭಿವೃದ್ಧಿ ಖಾತೆ ನೀಡಲಾಗಿದೆ. ಇದಾದ ನಂತರವೂ ನಾನು ರಾಮಲಿಂಗಾರೆಡ್ಡಿ ಅವರ ಪರವಾಗಿ ಖಾತೆ ಕೊಡಿಸಲು ಪ್ರಯತ್ನ ಪಟ್ಟಿದ್ದೆ, ಆದರೆ ಅಂತಿಮವಾಗಿ ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿರಬೇಕೆಂದು ಹೇಳಿದ್ದಾರೆ.

**ಸಂಪರ್ಕಕ್ಕೆ ಸಿಗದ ರಾಮಲಿಂಗಾರೆಡ್ಡಿ**

ರಾಹುಲ್ ಗಾಂಧಿ, ಸುರ್ಜೆವಾಲಾ, ವೇಣುಗೋಪಾಲ್, ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿಗೆ ಬಂದಿದ್ದು, ಕರೆದು ಮನವೊಲಿಸುವ ಯತ್ನ ಮಾಡುತ್ತಾರೆ ಎನ್ನುವ ಸುದ್ದಿ ತಿಳಿಯುತ್ತಿದ್ದಂತೆಯೇ ರಾಮಲಿಂಗಾರೆಡ್ಡಿ ಅವರು ಫೋನ್ ಆಫ್ ಮಾಡಿಕೊಂಡು ತಮಿಳುನಾಡು ಕಡೆ ಹೋಗಿದ್ದಾರೆಂದು ತಿಳಿದುಬಂದಿದೆ.

**ಕಾರ್ಯಕರ್ತನಾಗಿ ಕೆಲಸ ಮಾಡುವೆ**

ಸಚಿವ ಸ್ಥಾನಕ್ಕೆ ರಾಜೀನಾಮೆ ಘೋಷಣೆ ಮಾಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಮಲಿಂಗಾರೆಡ್ಡಿ ಅವರು, ಜಲ ಸಂಪನ್ಮೂಲ ಇಲಾಖೆ ನೀಡಿದ್ದಕ್ಕೆ ಬೇಸರ ಎಂಬ ಒಂದೇ ಕಾರಣಕ್ಕೆ ರಾಜೀನಾಮೆ ನೀಡುತ್ತಿಲ್ಲ. ಈಗಿನ ಮುಖ್ಯಮಂತ್ರಿ ಹಿಂದೆ ಅವರಾಗಿಯೇ ಬೆಂಗಳೂರು ನಗರಾಭಿವೃದ್ಧಿ ಖಾತೆ ಕೊಡುವ ಬಗ್ಗೆ ಭರವಸೆ ನೀಡಿದ್ದರು. ಆದರೆ, ಅದರಂತೆ ನಡೆದುಕೊಂಡಿಲ್ಲ, ಈ ವಿಚಾರ ಜನರಿಗೆ ತಿಳಿಯಬೇಕು ಎಂದು ಹೇಳಿದರು.

ನನಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮೇಲಾಗಲಿ ಅಥವಾ ಸಿದ್ದರಾಮಯ್ಯ ಅವರ ಮೇಲಾಗಲಿ ಯಾವುದೇ ವೈಯಕ್ತಿಕ ಕೋಪವಿಲ್ಲ, ನಾನು ಯಾವ ಕಾರಣಕ್ಕಾಗಿ ರಾಜೀನಾಮೆ ನೀಡಿದ್ದೇನೆಂಬ ಸತ್ಯ ಜನರಿಗೆ ಗೊತ್ತಾಗಬೇಕಷ್ಟೇ. ನಾನು ಕಳೆದ 53 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಒಬ್ಬ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದೇನೆ. ಪಕ್ಷ ನನಗೆ ಸಾಕಷ್ಟು ಅವಕಾಶಗಳನ್ನು ಮಾಡಿಕೊಟ್ಟಿದೆ. ನಾನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆಯೇ ಹೊರತು, ಕಾಂಗ್ರೆಸ್ ಪಕ್ಷಕ್ಕಲ್ಲ. ನನ್ನ ಜೀವನದಲ್ಲಿ ಎಂದಿಗೂ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿಲ್ಲ, ಮುಂದೆಯೂ ನೀಡುವುದಿಲ್ಲ ಎಂದು ತಿಳಿಸಿದರು.

> **ಮನವೊಲಿಕೆಗೆ ಬಗ್ಗದಿದ್ದರೆ ರಾಜೀನಾಮೆ ಅಂಗೀಕರಿಸಿ**
>
> ಸಚಿವರು ಅಸಮಾಧಾನಗೊಂಡಿರುವ ವಿಚಾರವನ್ನು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲಾ ರಾಹುಲ್ ಗಾಂಧಿಗೆ ಮಾಹಿತಿ ನೀಡಿದರು. ಈ ವಿಷಯವನ್ನು ಗಂಭೀರವಾಗಿ ತೆಗೆದು ಕೊಂಡಿರುವ ರಾಹುಲ್ ಗಾಂಧಿ ಅವರು, ಮನವೊಲಿಸಿ, ಬಗ್ಗದಿದ್ದರೆ ರಾಜೀನಾಮೆ ಅಂಗೀಕರಿಸಿ ಎಂದು ಕಡ್ಡಿಮುರಿದಂತೆ ರಾಜ್ಯ ನಾಯಕರಿಗೆ ಖಡಕ್ ಸೂಚನೆ ನೀಡಿದ್ದಾರೆ.

> **ರಾಮಲಿಂಗಾರೆಡ್ಡಿ ಅವರ ಜೊತೆ ನಾನು ಮಾತನಾಡುತ್ತೇನೆ, ಸಮಜಾಯಿಷಿ ನೀಡುತ್ತೇನೆ. ಅವರ ಮುನಿಸು ಶಮನಗೊಳಿಸುವ ಜವಾಬ್ದಾರಿ ನಮ್ಮದು. ಕೆ.ಹೆಚ್. ಮುನಿಯಪ್ಪ ಜೊತೆ ಮಾತನಾಡಿದ್ದು ಆಯಿತು, ರಾಹುಲ್‌ಗಾಂಧಿ ಹೇಳಿದ್ದು ಆಯಿತು, ಈಗ ಖುಷಿಯಾಗಿದ್ದಾರೆ. ಯಾವ ಖಾತೆ ಕೊಟ್ಟರೂ ಕೆಲಸ ಮಾಡುತ್ತೇನೆ ಎಂದಿದ್ದಾರೆ.**
>
> **-ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ**

## ರಾಜ್ಯಸಭೆ ಅಭ್ಯರ್ಥಿಯಾಗಿ ಮಲ್ಲಿಕಾರ್ಜುನ ಖರ್ಗೆ ನಾಮಪತ್ರ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದರು.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತರಿದ್ದರು.

ಕರ್ನಾಟಕ ವಿಧಾನಸಭೆಯಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಮೂರು ಸ್ಥಾನಗಳಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಕ್ತಾರ ಪವನ್ ಖೇರಾ, ಮನ್ಸೂರ್ ಅಲಿಖಾನ್ ಅವರ ಹೆಸರನ್ನು ಕಾಂಗ್ರೆಸ್ ಅಂತಿಮಗೊಳಿಸಿತ್ತು. ಖರ್ಗೆ ಅವರು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾಗಿದ್ದು, ಸದ್ಯ ಅವರು ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ. ರಾಜ್ಯಸಭೆಯ ಉಪಸಭಾಪತಿಯಾಗಿದ್ದ ಹಾಗು ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷ ರೆಹಮಾನ್ ಖಾನ್ ಪುತ್ರ ಮನ್ಸೂರ್ ಖಾನ್ ಅವರಿಗೆ ಎಐಸಿಸಿ ಅವಕಾಶ ಕಲ್ಪಿಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ, ನಾರಾಯಣ ಕೊರಗಪ್ಪ, ಈರಣ್ಣ ಕಡಾಡಿ ಅವರ ಅವಧಿ ಮುಕ್ತಾಯವಾಗಲಿದ್ದು, ಕರ್ನಾಟಕದಿಂದ ಆಯ್ಕೆಯಾಗಬೇಕಾದ ರಾಜ್ಯಸಭೆಯ ಈ ನಾಲ್ಕು ಸ್ಥಾನಗಳು ಸೇರಿ ರಾಜ್ಯಸಭೆಯ ಒಟ್ಟು 24 ಸ್ಥಾನಗಳಿಗೆ ಜೂನ್ 18ರಂದು ಚುನಾವಣೆ ನಿಗದಿಯಾಗಿದೆ. ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಮೂರು ಹಾಗು ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ.

ನಾಮಪತ್ರ ಸಲ್ಲಿಸಲು ಜೂನ್ 8 ಕೊನೆ ದಿನವಾಗಿದೆ. ನಾಮಪತ್ರಗಳ ಪರಿಶೀಲನೆ 9ಕ್ಕೆ ನಡೆಯಲಿದ್ದು, ನಾಮಪತ್ರ ಹಿಂದಕ್ಕೆ ಪಡೆಯಲು 10 ಕೊನೆ ದಿನ. 18ರಂದು ಮತದಾನ ನಡೆಯಲಿದೆ. ಮತಗಳ ಎಣಿಕೆ ಸಂಜೆ 5ಕ್ಕೆ ನಡೆಯಲಿದೆ.

## ಜ್ಞಾನ ಸಂಪಾದನೆ ಯುವಜನತೆಯ ಸಮೃದ್ಧಿಗೆ ಅಡಿಪಾಯ

### ಸ್ಪರ್ಧಾ ಕುಟೀರ, ಡಿಜಿಟಲ್ ಅಧ್ಯಯನ ಕೇಂದ್ರ ಉದ್ಘಾಟಿಸಿ ಶ್ರೇಯಸ್ ಪಟೇಲ್ ಅಭಿಮತ

• ಪ್ರಜೋದಯ ವರದಿ

**ಹಾಸನ:** ಹಸಿರು ಪರಿಸರ ನಿರ್ಮಾಣ ಮತ್ತು ಜ್ಞಾನ ಸಂಪಾದನೆ ಯುವ ಜನತೆಯ ಸಮೃದ್ಧಿಗೆ ಭದ್ರ ಅಡಿಪಾಯವಾಗಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ನಗರದ ಜಿಲ್ಲಾ ಕೇಂದ್ರ ಗ್ರಂಥಾಲಯದ ಆವರಣದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಹಸಿರು ಹಾಸನ ಕಾರ್ಯಕ್ರಮಕ್ಕೆ ಚಾಲನೆ ಹಾಗು ಹಾಸನ ಸ್ಪರ್ಧಾ ಕುಟೀರ ಮತ್ತು ಡಿಜಿಟಲ್ ಅಧ್ಯಯನ ಕೇಂದ್ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮೀಣ ಹಾಗು ನಗರ ಭಾಗದ ವಿದ್ಯಾರ್ಥಿಗಳಿಗೆ ಸಮಾನ ಅವಕಾಶಗಳನ್ನು ಒದಗಿಸುವ ಉದ್ದೇಶದಿಂದ ನಿರ್ಮಿಸಿರುವ ಈ ಕೇಂದ್ರವು ಸ್ಪರ್ಧಾತ್ಮಕ ಪರೀಕ್ಷೆಗಳ ಸಿದ್ಧತೆಗೆ ಅಗತ್ಯವಾದ ಆಧುನಿಕ ಅಧ್ಯಯನ ಸೌಲಭ್ಯಗಳನ್ನು ಒದಗಿಸಲಿದೆ ಎಂದು ತಿಳಿಸಿದರು.

ಹಾಸನ ನಗರ ಕೇಂದ್ರ ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗು ಸ್ಪರ್ಧಾತ್ಮಕ ಸಾಧನೆಗೆ ಹೊಸ ಆಯಾಮ ನೀಡುವ ಹಾಸನ ಸ್ಪರ್ಧಾ ಕುಟೀರ ಹಾಗು ಡಿಜಿಟಲ್ ಅಧ್ಯಯನ ಕೇಂದ್ರವನ್ನು ಉದ್ಘಾಟಿಸಿದ್ದು ಸಂತೋಷ ತಂದಿದೆ. ಇಂದಿನ ಕಾರ್ಯಕ್ರಮ ಎರಡು ಮಹತ್ವದ ಸಂದೇಶಗಳನ್ನು ಸಾರಿದ್ದು, ಒಂದು ಕಡೆ ಪರಿಸರ ಸಂರಕ್ಷಣೆ ಮೂಲಕ ಭೂಮಿಯ ಭವಿಷ್ಯವನ್ನು ಕಾಪಾಡುವ ಸಂಕಲ್ಪ, ಮತ್ತೊಂದು ಕಡೆ ಶಿಕ್ಷಣ ಮತ್ತು ಜ್ಞಾನದ ಮೂಲಕ ಯುವಜನರ ಭವಿಷ್ಯವನ್ನು ರೂಪಿಸುವ ಕಾಯಕಲ್ಪ ಎಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

> **ಯುವಜನತೆಯ ಒಂದು ಕೈಯಲ್ಲಿ ಗಿಡ, ಮತ್ತೊಂದು ಕೈಯಲ್ಲಿ ಪುಸ್ತಕ ಇರಲಿ. ಹಸಿರು ಹಾಸನ, ಜ್ಞಾನಮಯ ಹಾಸನ ನಿರ್ಮಾಣ ಮಾಡುವ ಕನಸು ಸಾಕಾರಗೊಳ್ಳಲಿ.**
>
> **-ಶ್ರೇಯಸ್ ಪಟೇಲ್, ಸಂಸದ**

### ಅಂಕವಳ್ಳಿ-ಬೂವನಹಳ್ಳಿಯಲ್ಲಿ ಘಟನೆ | ಆರು ಗಂಟೆ ಕಾರ್ಯಾಚರಣೆ ಬಳಿಕ ಸೆರೆ

# ಚಿರತೆ ದಾಳಿಯಿಂದ ಐವರಿಗೆ ಗಾಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಏಕಾಏಕಿ ಚಿರತೆ ದಾಳಿಯಿಂದ ಪ್ರತ್ಯೇಕ ಪ್ರಕರಣದಲ್ಲಿ ಐವರು ಗಾಯ ಗೊಂಡಿರುವ ಘಟನೆ ತಾಲ್ಲೂಕಿನ ಅಂಕವಳ್ಳಿ ಮತ್ತು ಬೂವನಹಳ್ಳಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಅಂಕವಳ್ಳಿಯ ನವೀನ್, ನಾಗೇಶ್, ಜಯಮ್ಮ ಹಾಗು ಬೂವನಹಳ್ಳಿಯ ಜಯಮ್ಮ, ವಸಂತ್ ಗಾಯಾಳುಗಳು. ಬೆಳಿಗ್ಗೆ 7ರ ಸಮಯದಲ್ಲಿ ನಾಗೇಶ್ ಅವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ನಾಯಿಯೊಂದನ್ನು ಅಟ್ಟಿಸಿಕೊಂಡು ಚಿರತೆ ಬಂದಿದೆ. ಜಮೀನಿನಲ್ಲಿ ವ್ಯಕ್ತಿಯನ್ನು ಕಂಡು ಅವರ ಮೇಲೆ ಏಕಾಏಕಿ ಎರಗಿದೆ. ನಾಗೇಶ್ ಅವರ ಮುಖ ಪರಚುತ್ತಿದ್ದಂತೆ ಜೋರಾಗಿ ಕೂಗಿದ್ದರಿಂದ ಪಕ್ಕದಲ್ಲೇ ಕೆಲಸ ಮಾಡುತ್ತಿದ್ದ ಸಹೋದರ ನವೀನ್ ಸ್ಥಳಕ್ಕೆ ಓಡಿ ಬಂದಿದ್ದು ಅವರ ಮೇಲೂ ಚಿರತೆ ದಾಳಿ ಮಾಡಿದೆ.

ಜಮೀನಿನಲ್ಲಿ ಜನರು ಹೆಚ್ಚಾಗುತ್ತಿದ್ದಂತೆ ಗಾಬರಿಗೊಂಡ ಚಿರತೆ ಅಲ್ಲಿಂದ ಪರಾರಿಯಾಗಲು ಯತ್ನಿಸಿದೆ. ಮಾರ್ಗ ಮಧ್ಯೆ ಜಮೀನಿಗೆ ಬರುತ್ತಿದ್ದ ಜಯಮ್ಮ ಎಂಬುವವರ ಮೇಲೆ ದಾಳಿ ನಡೆಸಿದ್ದು ಅವರು ರಸ್ತೆ ಮೇಲೆ ಬಿದ್ದಿದ್ದರಿಂದ ಗಂಭೀರ ಗಾಯಗೊಂಡಿದ್ದಾರೆ. ನಂತರ ಬೂವನಹಳ್ಳಿಯ ಗ್ರಾಮದಲ್ಲಿ ಮತ್ತೆ ಪ್ರತ್ಯಕ್ಷವಾದ ಚಿರತೆ ಇಬ್ಬರ ಮೇಲೆ ದಾಳಿ ನಡೆಸಿದೆ.

ಬಳಿಕ ಬೂವನಹಳ್ಳಿಯ ರಮೇಶ್ ಎಂಬುವವರ ಮನೆ ಪಕ್ಕದ ಕೊಟ್ಟಿಗೆಯಲ್ಲಿ ಅವಿತು ಕುಳಿತಿದ್ದ ಚಿರತೆಯನ್ನು ಕಂಡ ಸ್ಥಳೀಯರು ತಕ್ಷಣವೇ ಹೊರಗಿನಿಂದ ಬೀಗ ಹಾಕಿದ್ದಾರೆ. ಬಂಧನ ದಿಂದ ಬಿಡಿಸಿಕೊಳ್ಳಲು ಚಿರತೆ ಸಾಕಷ್ಟು ಪ್ರಯತ್ನ ಪಟ್ಟಿತಾದರೂ ಕಾರ್ಯ ಸಾಧ್ಯವಾಗದ ಹಿನ್ನಲೆಯಲ್ಲಿ ಅಲ್ಲಿಯೇ ನಿದ್ರಾವಸ್ಥೆಗೆ ಜಾರಿತು. ಚಿರತೆ ನೋಡಲು ಅಕ್ಕಪಕ್ಕದ ಊರುಗಳಿಂದಲೂ ಜನರು ಕಿಕ್ಕಿರಿದು ಸೇರಿದ್ದರು. ಮೈಸೂರಿನಿಂದ ಆಗಮಿಸಿದ್ದ ಪಶುವೈದ್ಯ ಡಾ.ಆದರ್ಶ ಅವರು ಅರವಳಿಕೆ ಚುಚ್ಚುಮದ್ದು ನೀಡಿ ಅರಣ್ಯಕ್ಕೆ ಚಿರತೆಯನ್ನು ಕರೆದೊಯ್ಯಲಾಯಿತು. ವಲಯ ಅರಣ್ಯ ಅಧಿಕಾರಿ ಕುಮಾರಸ್ವಾಮಿ ಮತ್ತು ತಂಡ ಸತತ ಆರು ಗಂಟೆಗಳ ಕಾರ್ಯಾಚರಣೆ ಬಳಿಕ ಚಿರತೆ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

**ಹಿಮ್ಸ್‌ನಲ್ಲಿ ಚಿಕಿತ್ಸೆ**

ಹೊಳೆನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸಿ ನಂತರ ಹಿಮ್ಸ್‌ಗೆ ರವಾನಿಸಲಾಯಿತು. ಆಸ್ಪತ್ರೆಗೆ ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಭೇಟಿ ನೀಡಿ ವೈದ್ಯರಿಂದ ಮಾಹಿತಿ ಪಡೆದರು. ಸಮರ್ಪಕ ಚಿಕಿತ್ಸೆ ನೀಡಿ ಯಾವುದೇ ತೊಂದರೆಯಾಗದಂತೆ ಸೂಚಿಸಿದರು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಗಾಯಾಳುಗಳಿಗೆ ಹೊಳೆನರಸೀಪುರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಮುಂಜಾಗ್ರತಾ ಕ್ರಮವಾಗಿ ಹಿಮ್ಸ್‌ಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದರು.

ವೈದ್ಯಾಧಿಕಾರಿ ಹಾಗು ತಜ್ಞರ ತಂಡ ಗಾಯಾಳುಗಳಿಗೆ ಅಗತ್ಯ ಚಿಕಿತ್ಸೆ ನೀಡುತ್ತಿದ್ದು, » ನಾಲ್ಕನೇ ಪುಟದಲ್ಲಿ

## ಪಶ್ಚಿಮ ಘಟ್ಟ ರಕ್ಷಣೆಗೆ ರಾಷ್ಟ್ರೀಯ ನೀತಿ ರೂಪಿಸಿ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕ ಸೇರಿ ಇತರ ರಾಜ್ಯಗಳಲ್ಲಿ ವ್ಯಾಪಿಸಿರುವ ಯುನೆಸ್ಕೋ ವಿಶ್ವ ಪರಂಪರೆ ತಾಣವಾದ ಪಶ್ಚಿಮ ಘಟ್ಟಗಳ ಸಂರಕ್ಷಣೆಗಾಗಿ ರಾಷ್ಟ್ರೀಯ ನೀತಿ ರೂಪಿಸುವಂತೆ ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ಸಮಿತಿ ಪ್ರಸ್ತಾಪಿಸಿದೆ.

ಈ ಕುರಿತು ಸಮಿತಿಯು ಕೇಂದ್ರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಕರ್ನಾಟಕ ಸರ್ಕಾರ ಹಾಗು ಪಶ್ಚಿಮ ಘಟ್ಟಗಳು ಸುಮಾರು 1,600 ಕಿ.ಮೀ. ವ್ಯಾಪ್ತಿಯಲ್ಲಿ ಹರಡಿರುವ ಕೇರಳ, ತಮಿಳುನಾಡು, ಗೋವಾ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಿಗೆ ಪತ್ರ ಬರೆದಿದೆ. ಪಶ್ಚಿಮ ಘಟ್ಟಗಳ ಪರ್ವತ ಪ್ರದೇಶದ ಸುಮಾರು ಶೇ.75 ಭಾಗ ಕರ್ನಾಟಕದಲ್ಲಿದೆ.

## ಶಾಸಕ ಶಿವಲಿಂಗೇಗೌಡರಿಗೆ ಸಚಿವ ಸ್ಥಾನ ನೀಡಲು ಆಗ್ರಹ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಬಲವರ್ಧನೆಯಾಗಬೇಕೆಂದರೆ ಸ್ಥಳೀಯರಿಗೆ ಸಚಿ

**ಇರುವುದು ಒಂದೇ ಭೂಮಿ, ಅದನ್ನು ನಮಗೆ ಮತ್ತು ನಮ್ಮ ಮುಂದಿನ ಪೀಳಿಗೆಗೆ ರಕ್ಷಿಸೋಣ, ಬೇರೆ ವನ್ಯಜೀವಿಗಳಿಗೂ ಈ ಭೂಮಿಯಲ್ಲಿ, ಪರಿಸರದಲ್ಲಿ ಪಾಲಿದೆ, ಅವುಗಳನ್ನೂ ರಕ್ಷಿಸೋಣ: ಆ ಉದ್ದೇಶಕ್ಕಾಗಿ ಹಾಗೆ ಮಾಡಬೇಕು, ಹೀಗೆ ಮಾಡಬೇಕು, ಇದನ್ನು ತ್ಯಜಿಸಬೇಕು, ಅದನ್ನು ತ್ಯಜಿಸಬೇಕು ಎಂದು ಪ್ರತಿವರ್ಷ ಜೂನ್ 5ರಂದು ದೊಡ್ಡ ದನಿಯಲ್ಲಿ, ನಾಟಕೀಯವಾಗಿ ಹೇಳುತ್ತಲೇ ಬಂದಿದ್ದೇವೆ; ಅದಕ್ಕೆಂದು ಸಕ್ರಿಯ ಕಾರ್ಯಸೂಚಿಯನ್ನು ರೂಪಿಸಲಾಗುತ್ತದೆ**

# ಪರಿಸರ ದಿನದ ಪ್ರಲಾಪ ಗಳಿಗೆ ಕೊನೆ ಎಂದು?



ಪರಿಸರ ಎಂದರೆ ನಮಗೆಲ್ಲಾ ಅಪಾರ ಪ್ರೀತಿ; ನಮ್ಮ ಪರಿಸರವನ್ನು ರಕ್ಷಿಸಬೇಕು, ಮುಂದಿನ ಪೀಳಿಗೆಗೆ ಪರಿಸರದ ಸಿರಿವಂತಿಕೆಯನ್ನು ಕಾಪಾಡಬೇಕು, ಪರಿಸರ ನಾಶವಾದರೆ ನಮ್ಮೆಲ್ಲರ ಬದುಕೇ ನಾಶ, ಬನ್ನಿ ಪರಿಸರ ರಕ್ಷಿಸೋಣ ಎಂದು ಯಾರಾದರೂ ಕರೆ ನೀಡಿದರೆ, ಎಲ್ಲರೂ ಕೈಜೋಡಿಸಲು ಮುಂದಾಗುತ್ತಾರೆ.

ಉತ್ತಮ ನಡೆ; ಅದರಲ್ಲಿ ಎರಡು ಮಾತಿಲ್ಲ, ಇಂತಹ ಒಂದು ಪ್ರೀತಿ, ಕಾಳಜಿಯನ್ನು ಮನಸ್ಸಿನಲ್ಲಿ ತುಂಬಿಕೊಂಡೇ ಹೇಳುತ್ತಿದ್ದೇನೆ : ಪರಿಸರ ದಿನವನ್ನು ದೊಡ್ಡ ಪ್ರಚಾರದೊಂದಿಗೆ ಆಚರಿಸಲು ಆರಂಭಿಸಿದ ನಂತರ, ನಮ್ಮ ಪರಿಸರ ಇನ್ನಷ್ಟು ಹದಗೆಟ್ಟಿದೆ! ಈ ಹೇಳಿಕೆ ಕೇಳಿ, ನಿಮ್ಮಲ್ಲಿ ಕೆಲವರಿಗಾದರೂ ಬೇಸರವಾದೀತು, ಈ ರೀತಿ ಹೇಳಬಾರದು, ಇದು ನಕಾರಾತ್ಮಕ ಭಾವನೆ ಎಂದು ಕೆಲವರಿಗೆ ಅನಿಸಲೂಬಹುದು.

ಆದರೆ, ಇಷ್ಟು ವರ್ಷ ನಿರಂತರವಾಗಿ, ಅವ್ಯಾಹತವಾಗಿ, ಮತಿಹೀನತೆಯಿಂದ, ದೂರಾಲೋಚನೆ ಇಲ್ಲದೇ, ಮುಂದಿನ ಸಮಸ್ಯೆಗಳ ಅರಿವಿದ್ದರೂ, ಪರಿಸರದ ನಾಶ ಈಗಲೂ ನಡೆಯುತ್ತಲೇ ಇದೆ. ಅದನ್ನು ಕಂಡು ಕಂಡು ಮೇಲಿನಂತಹ ಒಂದು ಭಾವನೆ ಮನದಲ್ಲಿ ಮೂಡಿದೆ: ಪರಿಸರ ದಿನಾಚರಣೆಯನ್ನು ಭಾರೀ ಪ್ರಚಾರದಿಂದ ನಡೆಸಲು ಆರಂಭಿಸಿದ ನಂತರ, ನಮ್ಮ ಸುತ್ತಲಿನ ಪರಿಸರ ಅಧೋಗತಿಯತ್ತ ಸಾಗುತ್ತಿದೆ.

ಈ ಪಯಣವು ಪ್ರಪಾತದತ್ತ ಸಾಗುತ್ತಾ, ಇನ್ನಷ್ಟು ಹದಗೆಡುತ್ತಲೇ ಇದೆ. ಕಳೆದ 50 ವರ್ಷಗಳಿಂದ ನಿರಂತರವಾಗಿ ನಡೆಯುತ್ತಿರುವ ಪರಿಸರ ನಾಶವನ್ನು ಕಂಡ, ಸಾರ್ಕಾಸ್ಟಿಕ್ ಆಗಿ ಮೇಲಿನ ಹೇಳಿಕೆಯನ್ನು ಬರೆದಿದ್ದೇನೆ, ಅಷ್ಟೇ.

ಮೊತ್ತಮೊದಲು ಪರಿಸರ ದಿನವನ್ನು ಆಚರಿಸಲು ಆರಂಭಿಸಿದ್ದು, 1972ರ ಜೂನ್ 5ರಂದು. ಅದಕ್ಕೆ ಸ್ಫೂರ್ತಿ ಎಂದರೆ, ವಿಶ್ವಸಂಸ್ಥೆಯ ಅಂಗಸಂಸ್ಥೆಯು ಜಗತ್ತಿನಾದ್ಯಂತ ಪರಿಸರ ದಿನಾಚರಣೆಯ ಮಹತ್ವವನ್ನು ಪ್ರಚುರಪಡಿಸಿ, ಎಲ್ಲಾ ದೇಶಗಳೂ ಜೂನ್ 5ರಂದು ಪರಿಸರ ದಿನಾಚರಣೆಯನ್ನು ಮಾಡಿ ಎಂದು ನೀಡಿದ ಕರೆ. ನಮ್ಮ ದೇಶವೂ ಸೇರಿದಂತೆ ಜಗತ್ತಿನ ಹೆಚ್ಚಿನ ದೇಶಗಳು ಈ ಆಚರಣೆಯನ್ನು ಆರಂಭಿಸಿದವು ಮತ್ತು ಪ್ರತಿ ವರ್ಷ ಪರಿಸರ ದಿನಾಚರಣೆಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಧ್ಯೇಯ ವಾಕ್ಯವನ್ನು ಗೌರವದಿಂದ ಜಾರಿಗೆ ತರುತ್ತಿದ್ದೇವೆ ಎಂದು ಹೇಳಿದವು.

1972ರಿಂದ ಪ್ರತಿ ವರ್ಷವೂ ಪರಿಸರಕ್ಕೆ ಸಂಬಂಧಿಸಿದಂತೆ ಒಂದೊಂದು ವಿಭಾಗಕ್ಕೆ ಒತ್ತು ಕೊಟ್ಟು ಪರಿಸರ ದಿನಾಚರಣೆ ನಡೆದಿದೆ : ಭೂಮಿ, ಪ್ಲಾಸ್ಟಿಕ್ ತ್ಯಾಜ್ಯ, ಮರುಭೂಮೀಕರಣದ ತಡೆ, ಜಲಮಾಲಿನ್ಯದ ತಡೆ – ಹೀಗೆ. ಇವೆಲ್ಲವೂ ನಮ್ಮ ಪರಿಸರವನ್ನು ಉತ್ತಮ ಪಡಿಸಲು ಕೈಗೊಂಡ ಕೈಂಕರ್ಯಗಳು.

ಆದರೆ, ನೀವೇ ನೋಡಿ, 1972ರಲ್ಲಿದ್ದ ಉತ್ತಮ ಪರಿಸರ, ಈಗ ಉಳಿದುಕೊಂಡಿದೆಯೇ? ಕಳೆದ ಅರ್ಧ ಶತಮಾನದಲ್ಲಿ, ಈ ರೀತಿ ಪರಿಸರ ದಿನಾಚರಣೆಯನ್ನು ಪ್ರತಿವರ್ಷ ನಡೆಸುತ್ತಿದ್ದರೂ, ನಮ್ಮಲ್ಲಿದ್ದ ಪರಿಸರ ನಾಶಗೊಂಡಿದೆ, ಪ್ಲಾಸ್ಟಿಕ್ ಮಾಲಿನ್ಯ ಹೆಚ್ಚಿದೆ, ವಾಯು ಮಾಲಿನ್ಯ ಅಧಿಕಗೊಂಡಿದೆ, ಜಲಮಾಲಿನ್ಯಕ್ಕೆ ಮಿತಿಯೇ ಇಲ್ಲ, ಸಮುದ್ರದ ನೀರಿನ ತನಕ ಪ್ಲಾಸ್ಟಿಕ್ ತುಣುಕುಗಳು ಸಾಗಿ ಹೋಗಿವೆ, ಇನ್ನೂ ಹಲವು ಆಯಾಮಗಳಲ್ಲಿ ನಡೆದಿರುವ ಪರಿಸರ ನಾಶ ಢಾಳಾಗಿ ಕಾಣಿಸುತ್ತಿದೆ.

ಹಿರಿಯರು ತಮ್ಮ ಕಣ್ಣೆದುರೇ ನಾಶಗೊಂಡಿರುವ, ಈಗಲೂ ನಾಶಗೊಳ್ಳುತ್ತಿರುವ ಪರಿಸರವನ್ನು ಕಂಡು, ನಿಟ್ಟುಸಿರು ಬಿಡುತ್ತಿದ್ದಾರೆ; ಈಗಿನ ಯುವಜನತೆಯು, ಕಳೆದ 54 ವರ್ಷಗಳಲ್ಲಿ ಸಾಗಿರುವ ಈ ಪಾತಾಳದತ್ತ ಪಯಣವನ್ನು ಕಣ್ಣಾರೆ ನೋಡದಿದ್ದರೂ, ಅಂಕಿ ಅಂಶಗಳನ್ನು ಗಮನಿಸಿ, 1972ರಿಂದ ಹೇಗೆ ನಮ್ಮ ಪರಿಸರ ನಾಶವಾಗಿದೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ವಿಶ್ವಸಂಸ್ಥೆಯ ಆಶ್ರಯದಲ್ಲಿ, ಜಗತ್ತಿನ ಸುಮಾರು 150 ದೇಶಗಳು, 5.6.1972ರಿಂದ ಪ್ರತಿವರ್ಷ ಪರಿಸರ ದಿನವನ್ನು ಆಚರಿಸುತ್ತಲೇ ಬಂದಿವೆ. ಜತೆಗೆ, ಈ ಸಂದರ್ಭದಲ್ಲಿ ಮಕ್ಕಳಿಗೆ, ಯುವಜನತೆಗೆ ಮತ್ತು ಎಲ್ಲರಿಗೂ ಪರಿಸರ ರಕ್ಷಿಸುವ ಅಗತ್ಯವನ್ನು ಕುರಿತು ತಿಳಿ ಹೇಳುತ್ತಲೇ ಇದ್ದಾರೆ. ಆದರೆ, ಭೂತಾನ್ ನಂತಹ ಕೆಲವು ದೇಶಗಳನ್ನು ಹೊರತುಪಡಿಸಿ, ಬೇರೆಲ್ಲಾ ಕಡೆ ಈ ಪರಿಸರ ದಿನಾಚರಣೆಯು ಕೇವಲ ತೋರಿಕೆಗೆ, ಘೋಷಣೆ ಕೂಗಲು, ಸಂದೇಶ ವಾಕ್ಯವನ್ನು ಮಾಧ್ಯಮಗಳಲ್ಲಿ ಪ್ರಚುರ ಪಡಿಸಲು, ಫೋಟೋಶೂಟ್‌ಗೆ, ಡಂಬಾಚಾರಕ್ಕೆ, ಬೂಟಾಟಿಕೆಗೆ ಮತ್ತು ಪ್ರಚಾರಕ್ಕೆ ಮಾತ್ರ ಒತ್ತುಕೊಟ್ಟಿದೆ ಎಂದೇ, ಬಹಳ ವ್ಯಸನದಿಂದ ಹೇಳಬೇಕಾಗಿದೆ.

ಇರುವುದು ಒಂದೇ ಭೂಮಿ, ಅದನ್ನು ನಮಗೆ ಮತ್ತು ನಮ್ಮ ಮುಂದಿನ ಪೀಳಿಗೆಗೆ ರಕ್ಷಿಸೋಣ,

ಬೇರೆ ವನ್ಯಜೀವಿಗಳಿಗೂ ಈ ಭೂಮಿಯಲ್ಲಿ, ಪರಿಸರದಲ್ಲಿ ಪಾಲಿದೆ, ಅವುಗಳನ್ನೂ ರಕ್ಷಿಸೋಣ: ಆ ಉದ್ದೇಶಕ್ಕಾಗಿ ಹಾಗೆ ಮಾಡಬೇಕು, ಹೀಗೆ ಮಾಡಬೇಕು, ಇದನ್ನು ತ್ಯಜಿಸಬೇಕು, ಅದನ್ನು ತ್ಯಜಿಸಬೇಕು ಎಂದು ಪ್ರತಿವರ್ಷ ಜೂನ್ 5ರಂದು ದೊಡ್ಡ ದನಿಯಲ್ಲಿ, ನಾಟಕೀಯವಾಗಿ ಹೇಳುತ್ತಲೇ ಬಂದಿದ್ದೇವೆ; ಅದಕ್ಕೆಂದು ಸಕ್ರಿಯ ಕಾರ್ಯಸೂಚಿಯನ್ನು ರೂಪಿಸಲಾಗುತ್ತದೆ, ಹಲವು ದೇಶಗಳ ಅತ್ಯುನ್ನತ ಅಧಿಕಾರ ಕೇಂದ್ರವೇ ಪರಿಸರ ರಕ್ಷಿಸಿ ಎಂದು ದೇಶವಾಸಿಗಳಿಗೆ ಕರೆ ಕೊಡುತ್ತದೆ, ಕೆಲವು ಕೆಲಸಗಳನ್ನೂ ಈ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಆದರೆ, ಇವೆಲ್ಲವೂ ಕೇವಲ ಬೂಟಾಟಿಕೆಯೇ, ಪ್ರಚಾರಕ್ಕಾಗಿಯೇ? ಹೌದು ಎನ್ನಲು ಹಲವು ಪುರಾವೆಗಳು ದೊರಕುತ್ತಿವೆ!

ಮೇಲ್ನೋಟಕ್ಕೆ ಗಮನಿಸಿದರೂ ಗೊತ್ತಾಗುತ್ತಿದೆ, 1972ರಲ್ಲಿ ಇದ್ದ ಪರಿಸರ ಈಗ ಇಲ್ಲ; ಕಳೆದ 50 ವರ್ಷಗಳಲ್ಲಿ ಭಾರೀ ಪ್ರಮಾಣದ ಪರಿಸರವು ವಿವಿಧ ಉದ್ದೇಶಗಳಿಗೆ, ನೆಪಗಳಿಗೆ (ಅಟಕಟ್ಟು, ಕಾಲುವೆ, ಕುಡಿಯುವ ನೀರು, ಕೃಷಿ ಭೂಮಿ ಇ) ನಾಶಗೊಂಡಿದೆ, ಗಬ್ಬೆದ್ದು ಹೋಗಿದೆ; ಅಲ್ಲಲ್ಲಿ ಕೆಲವು ಕ್ಷೇತ್ರಗಳಲ್ಲಿ ಪ್ರಗತಿ ಕಂಡರೂ, ಒಟ್ಟಾರೆ ತಕ್ಕಡಿಯಲ್ಲಿಟ್ಟು ನೋಡಿದಾಗ, ಪರಿಸರರಕ್ಷಣೆಗಿಂದ ಭಕ್ಷಣೆಯ ತೂಕವೇ ಅಧಿಕವಾಗಿ ಕಾಣಿಸುತ್ತಿದೆ.

ನಮ್ಮ ದೇಶದ ಪರಿಸರ ರಕ್ಷಣೆಯ ದೃಷ್ಟಿಯಿಂದ 1972 ಇನ್ನೂ ಮಹತ್ವದ ವರ್ಷ; ವಿಶ್ವಪರಿಸರ ದಿನಾಚರಣೆಯನ್ನು ಅದೇ ವರ್ಷ, ಜೂನ್ 5ರಿಂದ ನಮ್ಮ ದೇಶ ಆಚರಿಸಲು ಪ್ರಾರಂಭಿಸಿತು; ಅದೇ ವರ್ಷ, ವನ್ಯಜೀವಿ ರಕ್ಷಣಾ ಕಾಯ್ದೆಯೂ ನಮ್ಮಲ್ಲಿ ಜಾರಿಗೆ ಬಂತು; ಅದುವರೆಗೆ ನಮ್ಮ ಜನರು ಬೇಟೆಯಾಡುತ್ತಿದ್ದ ಅದೆಷ್ಟೋ ಪ್ರಾಣಿಗಳನ್ನು ಇನ್ನು ಮುಂದೆ ಬೇಟೆಯಾಡುವಂತಿಲ್ಲ ಎಂಬ ಕಾನೂನು ಜಾರಿಗೆ ಬಂತು; ಮುಂದಿನ ನಾಲ್ಕಾರು ವರ್ಷಗಳಲ್ಲಿ ಆ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ಆರಂಭಿಸಲಾಯಿತು.

ಬಂದೂಕು ಹಿಡಿದು, ಬಲೆ ಹಾಕಿ ಅಥವಾ ವಿಷ ಕೊಟ್ಟು ಸಾಯಿಸಲಾಗುತ್ತಿದ್ದ ಹುಲಿ, ಚಿರತೆ, ತೋಳ, ಕರಡಿ ಮೊದಲಾದ ಅದೆಷ್ಟೋ ಜೀವಿಗಳು ಬೇಟೆಯಿಂದ ತಪ್ಪಿಸಿಕೊಂಡವು; ಕಳ್ಳಬೇಟೆ ಅಲ್ಲಲ್ಲಿ ನಡೆಯುತ್ತಿದ್ದರೂ, ಅದೊಂದು ದೊಡ್ಡ ಅಪರಾಧ ಎಂದು ಎಲ್ಲೆಡೆ ಪ್ರಚಾರವಾಯಿತು. ಅದರಿಂದಾಗಿ, ನಮ್ಮ ದೇಶದಲ್ಲಿ ಹಲವು ವನ್ಯಜೀವಿಗಳು ಇಂದು ಸಂಖ್ಯೆಯಲ್ಲಿ ವೃದ್ಧಿಸಿವೆ; 1972ರಲ್ಲಿದ್ದು ದಕಿಂತಲೂ ಹೆಚ್ಚು ವನ್ಯಜೀವಿಗಳು ಇಂದು ಇವೆ; ವನ್ಯಜೀವಿಗಳೊಂದಿಗೆ ಸಹಬಾಳ್ವೆಯು ಸಾಧ್ಯ ಮತ್ತು ಅದಕ್ಕೆ ಈ ಕಾನೂನು ಪೂರಕ ಎಂದೇ ತಿಳಿಯಲಾಗುತ್ತಿತ್ತು.

ಆದರೆ, ಕಳೆದ ಒಂದೆರಡು ದಶಕಗಳಲ್ಲಿ, ಮಾನವ ವನ್ಯಜೀವಿ ಸಂಘರ್ಷ ಜಾಸ್ತಿಯಾಗುತ್ತಿದೆ; ಚಿಕ್ಕಮಗಳೂರು, ಹಾಸನ, ಮಹದೇಶ್ವರಬೆಟ್ಟ, ಸಕಲೇಶಪುರ, ಆನೆಕಲ್ಲು ಮೊದಲಾದ ಕಡೆ ಹುಲಿ, ಆನೆ, ಚಿರತೆ ಮೊದಲಾದ ಪ್ರಾಣಿಗಳು ಜನರನ್ನು ಸಾಯಿಸುತ್ತಿರುವ ಸುದ್ದಿ ಹೆಚ್ಚು ಬೆಳಕಿಗೆ ಬರಲಾರಂಭಿಸಿದೆ. ವನ್ಯಜೀವಿಗಳು ಹೆಚ್ಚಳಗೊಂಡರೂ, ಅವು ವಾಸಿಸುವ ಸ್ಥಳ ಕಿರಿದಾಗುತ್ತಲೇ ಹೋಗುತ್ತಿದೆ, ದೊಡ್ಡ ಕಾಡು, ಕುರುಚಲು ಕಾಡು, ಹುಲ್ಲು ಕಲ್ಲುಮಿಶ್ರಿತ ಹುಲ್ಲುಗಾವಲು, ಇಂತಹ ಎಲ್ಲಾ ಪರಿಸರವನ್ನು ಮನುಷ್ಯನು ಕೃಷಿ, ಸೈಟ್, ರಸ್ತೆ, ಅಟಕಟ್ಟು, ಸೇತುವೆ, ನದಿಸಂಪರ್ಕ ಮೊದಲಾದ ಯೋಜನೆಗಳಿಗೆ ನಿರಂತರವಾಗಿ ನಾಶಮಾಡುತ್ತಾ, ತನ್ನ ವ್ಯಾಪ್ತಿಯನ್ನು ವೇಗವಾಗಿ ಹಿಗ್ಗಿಸಿಕೊಳ್ಳುತ್ತಾ ಸಾಗಿದ್ದರಿಂದ, ವನ್ಯಜೀವಿಗಳ ಸಂಖ್ಯೆ ಜಾಸ್ತಿಯಾದರೂ, ಅವುಗಳೊಂದಿಗೆ ಸಂಘರ್ಷ ಜಾಸ್ತಿಯಾಗಿ, ಇಂದು ವನ್ಯಜೀವಿಗಳು ನಮ್ಮ ಪ್ರಗತಿಗೆ ಮಾರಕವೇ? ಎಂಬ ಅಭಿಪ್ರಾಯಗಳು ಅಲ್ಲಲ್ಲಿ ವ್ಯಕ್ತವಾಗಲು ತೊಡಗಿದೆ.

ಇದು ಪರಿಸರ ರಕ್ಷಣೆಯ ಆಶಯಕ್ಕೆ ತದ್ವಿರುದ್ಧ ಎನಿಸುವುದಿಲ್ಲವೆ? ಪ್ರತಿ ವರ್ಷ ನಡೆಸುತ್ತಿರುವ ಪರಿಸರ ದಿನಾಚರಣೆಯ ತತ್ವಕ್ಕೆ ಪೂರ್ತಿ ವಿರುದ್ಧ ದಿಕ್ಕಿನಲ್ಲಿ ಮನುಷ್ಯನ ಪ್ರಗತಿ ಮತ್ತು ವನ್ಯಜೀವಿಗಳೊಂದಿಗೆ ಮುಖಾಮುಖಿ (ಸಂಘರ್ಷ) ನಡೆಯುತ್ತಿದೆ!

ಹಾಗೆ ನೋಡಿದರೆ, 1972ರಲ್ಲಿ ಆರಂಭಗೊಂಡ ವಿಶ್ವಪರಿಸರ ದಿನದ ಆಶಯವು ಮಹೋನ್ನತವಾದುದು; ವಿಶ್ವಸಂಸ್ಥೆಯ ಆಶ್ರಯದಲ್ಲಿ ಆರಂಭಗೊಂಡ ಈ ದಿನದ ಆಚರಣೆಯನ್ನು ಪ್ರತಿ ವರ್ಷ ಒಂದೊಂದು ದೇಶವು ಆಚರಿಸುವ ಆತಿಥ್ಯವನ್ನು ಹೊತ್ತುಕೊಂಡವು; ನಮ್ಮ ದೇಶವೂ ಎರಡು ಬಾರಿ (1975 ಮತ್ತು 2018) ಇಂತಹ ಆತಿಥ್ಯವನ್ನು ವಹಿಸಿದೆ. ಆದರೆ, ಆತಿಥ್ಯದ ಹೊಣೆ ಹೊರುವ, ತುಸು ಆಡಂಬರ ಎನಿಸುವ ಈ ಪ್ರಕ್ರಿಯೆಯ ಹಿಂದೆ ಇರುವುದು ತೋರಿಕೆಯ ಶಿಷ್ಟಾಚಾರ ಮಾತ್ರ!

ಹಾಗೆಂದು, ಈಗ ಕೆಲವರಿಗೆ ಅರಿವಾಗುತ್ತಿದೆ. ವಿಶ್ವ ಪರಿಸರ ದಿನಾಚರಣೆಯ ಆಶಯಗಳು ಮಹತ್ ಇರಬಹುದು, ಆದರೆ ಫಲಿತಾಂಶ ಮಾತ್ರ ಬಹುಪಾಲು ಸೊನ್ನೆ ಎಂದು ಕಳೆದ ಅರ್ಧ ಶತಮಾನದ ಅಂಕಿ ಅಂಶಗಳು ಹೇಳುತ್ತಿವೆ. ಇಂತಹ ಆಚರಣೆಯ ಪ್ರಚಾರ ಮತ್ತು ಪ್ರತಿವರ್ಷ ಅದನ್ನು ಒಂದೊಂದು ದೇಶ ಆತಿಥ್ಯ ವಹಿಸುತ್ತದೆ ಎಂಬ ಪ್ರಚಾರವು ಕೇವಲ ಶಿಷ್ಟಾಚಾರ ಎಂಬುದಕ್ಕೆ ಪುರಾವೆ ಇದೆ : ನಮ್ಮ ದೇಶವು ಎರಡು ಬಾರಿ ಇದರ ಆತಿಥ್ಯವನ್ನು ವಹಿಸಿದರೆ, ಬಾಂಗ್ಲಾದೇಶವು ಒಟ್ಟು ಒಂಬತ್ತು ಬಾರಿ ಆತಿಥ್ಯ ವಹಿಸಿದೆ!

ನಮ್ಮ ದೇಶದಲ್ಲಿ ಹುಲಿ ಯೋಜನೆ ಮೊದಲಾದ ಕೆಲವು ಯಶಸ್ವಿ (ತಾತ್ಕಾಲಿಕ) ಯೋಜನೆಗಳನ್ನಾದರೂ ಹೆಸರಿಸ ಬಹುದೇನೋ, ಆದರೆ ಪರಿಸರದಿನಾಚರಣೆಯನ್ನು ಒಂಬತ್ತು ಬಾರಿ ಆತಿಥ್ಯ ವಹಿಸಿದ್ದರಿಂದಾಗಿ, ಬಾಂಗ್ಲಾದೇಶದ ಪರಿಸರದ ರಕ್ಷಣೆಗೆ ಯಾವುದೇ ಲಾಭವಾಗಿಲ್ಲ. ಅಲ್ಲಿನ ಸುಂದರ್‌ಬನ ಪರಿಸರವು ಮೊದಲಿಗಿಂತಲೂ ತೀವ್ರ ಹಾನಿಗೊಳಗಾಗಿದೆ ಮತ್ತು ಪಕ್ಕದಲ್ಲೇ ನಮ್ಮ ದೇಶದಲ್ಲಿ ಮುಂದುವರಿದಿರುವ ಆ ವನದ ಭಾಗವನ್ನು ರಕ್ಷಿಸಲು, ನಮ್ಮ ದೇಶದ ಮೇಲೆ ಹೆಚ್ಚಿನ ಒತ್ತಡವಾಗುತ್ತಿದೆ.

ಇದು ಒಂದು ಉದಾಹರಣೆ ಮಾತ್ರ; ಪರಿಸರ ದಿನಾಚರಣೆಯ ಆತಿಥ್ಯ ವಹಿಸುವ, ಹೆಚ್ಚಿನ ಪ್ರಚಾರದ ಒಂದು ವಿದ್ಯಮಾನವು, ಕೇವಲ ಶಿಷ್ಟಾಚಾರ ಮತ್ತು ಪ್ರಚಾರದ ಪ್ರಭಾವಳಿಗೆ ಸಿಲುಕಿದೆಯೇ ಹೊರತು, ಅದರಿಂದ ನಿಜವಾಗಿಯೂ ಪರಿಸರದ ರಕ್ಷಣೆ ನಡೆಯುತ್ತಿಲ್ಲ ಎಂಬುದಕ್ಕೆ ಇದೊಂದು ಪುಟ್ಟ ಉದಾಹರಣೆ.

ಜಾಗತಿಕ ಮಟ್ಟದಲ್ಲಿ ಗಮನಿಸಿದರೆ, 1972ರ ನಂತರ, ಹಲವು ಆಯಾಮದಲ್ಲಿ ಪರಿಸರದ ತೀವ್ರ ಹಾನಿ ಮುಂದುವರಿದಿದೆ. ಜಗತ್ತಿಗೆ ಶುದ್ಧ ಆಮ್ಲಜನಕ ನೀಡುವ ಶ್ವಾಸಕೋಶ ಎಂಬ ಹೆಗ್ಗಳಿಕೆ ಪಡೆದಿರುವ ಅಮೆಜಾನ್ ಅರಣ್ಯ ಪ್ರದೇಶವು, 1972ರಿಂದ ಇಂದಿನ ತನಕ ಸಾಕಷ್ಟು ನಲುಗಿದೆ; ಅಂಕಿ ಅಂಶಗಳ ಪ್ರಕಾರ, ಕಳೆದ ಶತಮಾನದಲ್ಲಿ 1972ರ ತನಕ ಅಮೆಜಾನ್ ಅರಣ್ಯವು ಶೇ.2ರಷ್ಟು ನಾಶವಾಗಿದ್ದರೆ, ನಂತರದ 50 ವರ್ಷಗಳಲ್ಲಿ ಸುಮಾರು ಶೇ.20ರಷ್ಟು ನಾಶವಾಗಿದೆ!

ಕಳೆದ 50 ವರ್ಷಗಳಲ್ಲಿ, ಅಮೆಜಾನ್ ಅರಣ್ಯ ಪ್ರದೇಶವು ಮೂಲ ವ್ಯಾಪ್ತಿಗಿಂತ ಸುಮಾರು ಒಂದನೇ ಐದರಷ್ಟು ಭಾಗ ನಾಶಗೊಂಡಿದ್ದು, ಇವೆಲ್ಲವೂ ವಿಶ್ವ ಪರಿಸರ ದಿನಾಚರಣೆಯು ದೊಡ್ಡ ಪ್ರಚಾರದಿಂದ ನಡೆಯುತ್ತಿರುವ ಅವಧಿಯಲ್ಲೇ ಎಂಬುದು ಬೇಸರದ ವಿಚಾರ. ಅಮೆಜಾನ್ ಅರಣ್ಯವನ್ನು ದೊಡ್ಡ ಪ್ರಮಾಣದಲ್ಲಿ ಹೊಂದಿರುವ ಬ್ರೆಜಿಲ್ ಸಹ ಎರಡು ಬಾರಿ ವಿಶ್ವಪರಿಸರ ದಿನಾಚಣೆಯ ಆತಿಥ್ಯದ ಹೊಣೆಯನ್ನು ಹೊತ್ತಿತ್ತು!

ಆದರೆ, ಪ್ರಯೋಜನ ಮಾತ್ರ ಅಷ್ಟಕ್ಕಷ್ಟೆ, ಅತ್ತ, ಜಗತ್ತಿನ ಪರಿಸರ ನಾಶಕ್ಕೆ ಅತಿ ಹೆಚ್ಚು ಕೊಡುಗೆಯನ್ನು, ಕೊಳಕನ್ನು (ತಲಾವಾರು) ಕೊಡುತ್ತಿರುವ ಯು.ಎಸ್. ದೇಶವು, ತನ್ನ ದೇಶದ ಪರಿಸರವನ್ನು ರಕ್ಷಿಸಲು ಸಾಕಷ್ಟು ಜಾಗ್ರತೆ ತೆಗೆದುಕೊಂಡರೂ, ಜಗತ್ತಿನ ಪರಿಸರದ ಕಾಳಜಿಗೆ ಎರಡನೆಯ ಸ್ಥಾನ ನೀಡಿದೆ. ಪೆಟ್ರೋಲ್, ಡೀಜಲ್ ಮೊದಲಾದ ತೈಲವನ್ನು ಸುಡುವ ಪ್ರಮಾಣವನ್ನು ಕಡಿಮೆ ಮಾಡಬೇಕು ಎಂಬ ಜಾಗತಿಕ ಒತ್ತಾಯಕ್ಕೆ ಆ ದೊಡ್ಡ ದೇಶ ನೀಡುತ್ತಿರುವ ಬೆಲೆ ಅಷ್ಟಕ್ಕಷ್ಟೇ.

ಅವೆಷ್ಟೋ ಪರಿಸರ ರಕ್ಷಣಾ ಕ್ರಮಗಳನ್ನು ನೇರವಾಗಿ ತಿರಸ್ಕರಿಸುವ ದಾಢಸಿತನವನ್ನು ಹೊತ್ತಿರುವ ಯು.ಎಸ್., ತನ್ನ ನಾಗರಿಕರ ಹಿತಕ್ಷಣೆಗೆ, ತನ್ನ ದೇಶದೊಳಿಗೆ ಪರಿಸರ ಉಳಿಸಲು, ಇಡೀ ಜಗತ್ತಿನ ಜನರ ಬದುಕನ್ನೇ ಸಂಕಷ್ಟಕ್ಕೆ ಗುರಿಯಾಗಿಸಲು ಹಿಂದೆ ಮುಂದೆ ನೋಡುವುದಿಲ್ಲ. ಅಲ್ಲಿಗೆ, ವಿಶ್ವ ಪರಿಸರ ದಿನದ ಆಶಯಕ್ಕೆ ದೊಡ್ಡ ದೇಶಗಳು ನೀಡುತ್ತಿರುವ ಬೆಲೆ ಎಷ್ಟು ಎಂದು ಗೊತ್ತಾಯಿತು!

ನಮ್ಮ ದೇಶದಲ್ಲಿ ಪರಿಸರ ದಿನಾಚರಣೆ ನಡೆಸುವ ಜೂನ್ 5 ದಿನಾಂಕಕ್ಕೆ, ಒಂದು ಸಣ್ಣ ಭಾವನಾತ್ಮಕ ಸಂಬಂಧವೂ ಇದೆ. ಪ್ರತಿವರ್ಷ ಮಾನ್ಸೂನ್ ಮಳೆಗಳು ನಮ್ಮಲ್ಲಿ ಆರಂಭವಾಗುವುದು ಜೂನ್ ಸಮಯದಲ್ಲಿ. ಪರಿಸರ ದಿನದ ಸಮಯಕ್ಕಾಗಲೇ, ದಕ್ಷಿಣ ಭಾರತದ ದೊಡ್ಡ ಭಾಗ ಮತ್ತು ಉತ್ತರ ಭಾರತದ ಕೆಲವು ಭಾಗಗಳಲ್ಲಿ ಮಳೆ ಸುರಿದು, ನೆಲವೆಲ್ಲಾ ಹಸಿರಾಗುತ್ತದೆ, ಒಣಗಿದ ಗಿಡಮರಗಳು ಹಸಿರೊಡೆಯುತ್ತವೆ.

ನಮ್ಮ ರಾಜ್ಯದ ಮಟ್ಟಿಗಂತೂ ಇದು ಎದ್ದು ಕಾಣುವ ಸಕಾರಾತ್ಮಕ ವಿದ್ಯಮಾನವೂ ಹೌದು. ಆದರೆ, ಪರಿಸರ ದಿನಾಚರಣೆಯ ನಾಟಕ ಮುಗಿದ ನಂತರ, ಸರಕಾರವೂ ಸೇರಿದಂತೆ ಹೆಚ್ಚಿನವರು ಪರಿಸರ ರಕ್ಷಣೆಯನ್ನು ಮರೆತೇ ಬಿಡುತ್ತಾರೆ. ಎತ್ತಿನ ಹೊಳೆ ಯೋಜನೆಯ ನೆಪ, ಮೇಕೆದಾಟು ಯೋಜನೆಯ ನೆಪ, ಕ್ರಿಕೆಟ್ ಸ್ಟೇಡಿಯಂ ಯೋಜನೆಯ ನೆಪ, ಗಣಿಗಾರಿಕೆಯ ನೆಪ, ವಿದ್ಯುತ್ ಇನ್ನೂ ಬೇಕು ಎಂಬ ನೆಪ, ಪ್ಯಾಕಿಂಗ್ ಸುಲಭ ಎಂಬ ನೆಪ, ಬೇಸಗೆಯಲ್ಲಿ ಎಸಿ ಕೂಲರ್ ಬೇಕೇ ಬೇಕು ಎಂಬ ನೆಪ – ಎಲ್ಲಾ ನೆಪಗಳನ್ನು ಮುಂದೊಡ್ಡಿ, ಸುಖ ಜೀವನ ಮತ್ತು ಅಭಿವೃದ್ಧಿ ಕಾಮಗಾರಿಯೇ ಮುನ್ನೆಲೆಗೆ ಬಂದು, ನಮ್ಮ ಪರಿಸರ ಹಿನ್ನೆಲೆಗೆ ಸರಿಯುತ್ತದೆ! ಅದರ 

# ಯುಜಿಡಿಗೆ 130 ಕೋ. ರೂ. ಅನುದಾನ ಅಗತ್ಯ

## 25 ಲಕ್ಷ ರೂ. ವೆಚ್ಚದ ಕುಡಿಯುವ ನೀರಿನ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದ ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮೂಲ ಸೌಕರ್ಯಗಳಲ್ಲಿ ಪ್ರಮುಖವಾದ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ನುಗ್ಗೇಹಳ್ಳಿ ಬಡಾವಣೆಯ ವಾರ್ಡ್ ನಂ.1 ರಲ್ಲಿ ನದಿ ಮೂಲದಿಂದ ಕುಡಿಯುವ ನೀರು ಕಲ್ಪಿಸುವ 25 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಹಾಲಿಂಗಪ್ಪ ಬಡಾವಣೆಗೂ ವಿಸ್ತರಿಸಲಾಗುವುದು ಎಂದರು.

94 ಸಿಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿರುವ ಇಲ್ಲಿನ ಕುಟುಂಬಗಳಿಗೆ ಹಕ್ಕುಪತ್ರ ನೀಡುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿದೆ. ಒಂದಷ್ಟು ವ್ಯಾಪ್ತಿಯು ದಿಂಡಗೂರು ಹಾಗೂ ಜನಿವಾರ ಗ್ರಾಮ ಪಂಚಾಯಿತಿಗೆ ಸೇರಲಿದ್ದು ಕಾನೂನು ರೀತಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸಿ ಅಧಿಕೃತವಾಗಿ ಹಕ್ಕುಪತ್ರಗಳನ್ನು ವಿತರಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಪುರಸಭೆ ವ್ಯಾಪ್ತಿಗೆ ಸೇರಿರುವ ಹಿನ್ನೆಲೆಯಲ್ಲಿ ಯುಜಿಡಿ ವ್ಯವಸ್ಥೆಯನ್ನು ಸಹ ಮಹಾಲಿಂಗಪ್ಪ ಲೇಔಟ್ ಸೇರಿದಂತೆ ಇಲ್ಲಿನ ಬಡಾವಣೆಗೂ ವಿಸ್ತರಿಸಲು ಯೋಜನೆ ರೂಪಿಸಲಾಗಿದೆ. ಮುಂದಿನ ದಿನಗಳಲ್ಲಿ ಲಭ್ಯವಾಗುವ ಅನುದಾನ ಬಳಕೆ ಮಾಡಿಕೊಂಡು ಅಭಿವೃದ್ಧಿಗೊಳಿಸಲಾಗುವುದು ಎಂದರಲ್ಲದೆ, ಇತ್ತೀಚೆಗೆ ಮನೆ ಗಣತಿ ಜರುಗಿದ್ದು ನಗರಸಭೆ ಅರಸೀಕೆರೆಯು 19,200 ಜನವಸತಿ ಹೊಂದಿದ್ದರೆ, ಪುರಸಭೆ ಚನ್ನರಾಯಪಟ್ಟಣವು 20,500 ಮನೆಗಳನ್ನು ಹೊಂದಿದೆ. ಆದ್ದರಿಂದ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಹೆಚ್ಚಿನ ಅನುದಾನ ಅಗತ್ಯವಿದೆ ಎಂದು ತಿಳಿಸಿದರು.

ಪಟ್ಟಣದ ಯುಜಿಡಿ ವ್ಯವಸ್ಥೆಯನ್ನು ಸೂಕ್ತವಾಗಿ ನಿರ್ವಹಿಸಲು 130 ಕೋಟಿ ರೂ. ಅನುದಾನ ಅಗತ್ಯವಿರುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೇ.50 ರಷ್ಟು ಅನುದಾನ ನೀಡಿದರೆ ನಾಲ್ಕು ಭಾಗವಾಗಿ ವಿಂಗಡಿಸಿ ಹೈಟೆಕ್ ಮಾದರಿಯಲ್ಲಿ ಯುಜಿಡಿ ವ್ಯವಸ್ಥೆ ಮಾಡಿ ಸರ್ವತೋಮುಖ ಅಭಿವೃದ್ಧಿಗೊಳಿಸಲಾಗುವುದು ಎಂದರು.

ಸರ್ಕಾರದಿಂದ 15 ನೇ ಹಣಕಾಸಿನ ಯೋಜನೆಯಡಿ ಪಟ್ಟಣದ ಅಭಿವೃದ್ಧಿಗೆ 1.50 ಕೋಟಿ ರೂ. ಅನುದಾನ ಲಭ್ಯವಾಗಲಿದ್ದು ಚರಂಡಿ ನಿರ್ಮಾಣಕ್ಕೆ ಕೇವಲ 75 ಲಕ್ಷ ರೂ. ಬಳಕೆ ಮಾಡಬಹುದು. ಇದರಿಂದ ಪಟ್ಟಣವನ್ನು ಪರಿಪೂರ್ಣವಾಗಿ ಅಭಿವೃದ್ಧಿಗೊಳಿಸಲು ಸಾಧ್ಯವಿಲ್ಲ. ಆದರೆ ಪುರಸಭೆಯ ತೆರಿಗೆ ಹಣವು ಸೋರಿಕೆ ಆಗದಂತೆ ಕ್ರಮ ವಹಿಸಿ 3 ರಿಂದ 4 ವರ್ಷದಲ್ಲಿ ಒಟ್ಟು 15 ಕೋಟಿ ರೂ. ತೆರಿಗೆ ಹಣದಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಪಟ್ಟಣವನ್ನು ಅಭಿವೃದ್ಧಿಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪುರಸಭೆ ಮುಖ್ಯಾಧಿಕಾರಿ ಯತೀಶ್, ಪುರಸಭೆಯ ಮಾಜಿ ಅಧ್ಯಕ್ಷ ಸುರೇಶ್, ದಿಂಡಗೂರು ಸೊಸೈಟಿ ಮಾಜಿ ಅಧ್ಯಕ್ಷ ನಂಜುಂಡಪ್ಪ, ಮಂಜಣ್ಣ, ರಾಜು, ಶಿವು ಮಂಜುನಾಥ್ ಇನ್ನಿತರರು ಇದ್ದರು.

# ಸಸಿ ನೆಟ್ಟರೆ ಸಾಲದು, ಪೋಷಿಸಿ ಬೆಳೆಸಬೇಕು

• ಪ್ರಜೋದಯ ವರದಿ

**ಅರಸೀಕೆರೆ:** ವಿಶ್ವ ಪರಿಸರ ದಿನಾಚರಣೆಯಂದು ಸಸಿ ನೆಟ್ಟರೆ ಸಾಲದು ನೆಟ್ಟ ಸಸಿಯನ್ನು ಪೋಷಿಸಿ ಬೆಳೆಸಿದಾಗ ಮಾತ್ರ ವಿಶ್ವ ಪರಿಸರ ದಿನದ ಆಚರಣೆಗೆ ಅರ್ಥ ಬರುತ್ತದೆ ಎಂದು ತಾಲ್ಲೂಕು ಕಾನೂನು ಸೇವಾ ಸಮಿತಿಯ ಅಧ್ಯಕ್ಷರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ ನ್ಯಾಯಾಧೀಶರಾದ ಕಿರಣ್ ಕುಮಾರ್ ಡಿ. ವಡಿಗೇರಿ ಹೇಳಿದರು.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ, ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲ್ಲೂಕು ಕಾನೂನು ಸೇವಾ ಸಮಿತಿ ಮತ್ತು ವಕೀಲರ ಸಂಘ, ಹಾಗೂ ಅರಣ್ಯ ಇಲಾಖೆ ಸಂಯುಕ್ತ ಆಶಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಿಸರ ದಿನಾಚರಣೆ ದಿನದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ನಗರದ ಸರ್ಕಾರಿ ಜಯಚಾಮ ರಾಜೇಂದ್ರ ಆಸ್ಪತ್ರೆ ಆವರಣದಲ್ಲಿ ಸಸಿ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ವನ್ಯಜೀವಿ ಮತ್ತು ಅರಣ್ಯ ಸಂಪತ್ತನ್ನು ಕಾಪಾಡುವುದು ಸರ್ಕಾರಿ ನೌಕರರ ಕೆಲಸ ಮಾತ್ರವಲ್ಲ ಪ್ರತಿಯೊಬ್ಬ ನಾಗರೀಕನ ಜವಾಬ್ದಾರಿ. ವಿಶ್ವ ಪರಿಸರ ದಿನಾಚರಣೆ ದಿನ ಮನುಕುಲವನ್ನು ಜಾಗೃತಿಗೊಳಿಸುವ ದಿನವಾಗಿದೆ. ಪ್ರಕೃತಿಯಲ್ಲಿ ಆಗುತ್ತಿರುವ ಅಸಮತೋಲನವನ್ನು ಮನುಷ್ಯ ಸರಿಪಡಿಸಿಕೊಳ್ಳದೆ ಹೋದರೆ ಮುಂದಿನ ದಿನಗಳಲ್ಲಿ ಪ್ರಕೃತಿಯ ಮುಂದೆ ಮನುಷ್ಯ ಮಂಡಿ ಊರಿ ಕೂರುವ ಕಾಲ ದೂರವಿಲ್ಲ ಎಂದು ಎಚ್ಚರಿಕೆ ನೀಡಿದರು.

ಜೆಎಂಎಫ್‌ಸಿ ನ್ಯಾಯಾಲಯದ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ವೀಣಾ ಕೋಳೇಕರ್ ಮಾತನಾಡಿ, ನಮ್ಮ ಮನೆ ಮತ್ತು ಅಂಗಳವನ್ನು ಸ್ವಚ್ಛವಾಗಿ ಇಟ್ಟುಕೊಂಡಂತೆ ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸಹ ಸ್ವಚ್ಛವಾಗಿಟ್ಟುಕೊಳ್ಳುವ ಸಂಕಲ್ಪವನ್ನು ನಾವೆಲ್ಲ ಮಾಡಬೇಕಿದೆ. ಸ್ವಚ್ಛ ಪರಿಸರದಿಂದ ಮಾತ್ರ ಉತ್ತಮ ಆರೋಗ್ಯ ಉತ್ತಮ ಆರೋಗ್ಯದಿಂದ ಸದೃಢ ಸಮಾಜ ನಿರ್ಮಾಣ ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಸಂಕಲ್ಪವನ್ನು ಪ್ರತಿಯೊಬ್ಬರೂ ಮಾಡಬೇಕಿದೆ ಎಂದು ಅವರು ಕರೆ ನೀಡಿದರು.

ವಲಯ ಅರಣ್ಯ ಅಧಿಕಾರಿ ಹೇಮಂತ್ ಕುಮಾರ್, ಸಾಮಾಜಿಕ ಅರಣ್ಯ ಅಧಿಕಾರಿ ಲಕ್ಷ್ಮಿ, ತಾಲ್ಲೂಕು ವೈದ್ಯಾಧಿಕಾರಿ ಡಾ.ರಂಗನಾಥ್ ಇದ್ದರು.

# ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್: ಸರ್ಕಾರ ಆದೇಶ

• ಪ್ರಜೋದಯ ವರದಿ

**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರ ವಹಿಸಿಕೊಂಡ ನಂತರ ನಡೆದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಘೋಷಿಸಲಾದ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಯೋಜನೆಯನ್ನು ಜಾರಿಗೆ ತರುವಂತೆ ಕರ್ನಾಟಕ ಸರ್ಕಾರ ಶುಕ್ರವಾರ ಆದೇಶ ಹೊರಡಿಸಿದೆ.

ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದಾದ್ಯಂತ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯವನ್ನು ವಿಸ್ತರಿಸಲು ನಿರ್ಧರಿಸಲಾಯಿತು.

ರಾಜ್ಯದಲ್ಲಿ ಇನ್ನುಂದೆ ವಿದ್ಯಾರ್ಥಿನಿಯರಂತೆ ಎಲ್ಲ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೂ ಕೂಡ ಉಚಿತ ಬಸ್ ಪಾಸ್ ನೀಡಲಾಗುವುದು. ಶೈಕ್ಷಣಿಕ ವರ್ಷ ಆರಂಭವಾಗಿದ್ದು, ಇದಕ್ಕಾಗಿ ಅರ್ಜಿ ವಿತರಣೆ ಬಗ್ಗೆ ಸಾರಿಗೆ ಇಲಾಖೆ ಶೀಘ್ರದಲ್ಲಿಯೇ ಕ್ರಮ ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ತಿಳಿಸಿದರು.

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ಅಡಿಯಲ್ಲಿ ಕಾರ್ಯನಿರ್ವಹಿಸುವ ಬಸ್‌ಗಳಲ್ಲಿ ಪ್ರಯಾಣಿಸುವ ಕರ್ನಾಟಕದ ಎಲ್ಲ ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತರಿಸಲು ಸರ್ಕಾರ ತಾತ್ವಿಕವಾಗಿ ಅನುಮೋದನೆ ನೀಡಿದೆ' ಎಂದು ಹೇಳಿಕೆ ತಿಳಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ , ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ , ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನಿರ್ವಹಿಸುವ ಬಸ್‌ಗಳಲ್ಲಿ ಪ್ರಯಾಣಿಸುವ ವಿದ್ಯಾರ್ಥಿಗಳು ಈ ಸೌಲಭ್ಯವನ್ನು ಪಡೆಯಬಹುದು.

ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ವಿವರವಾದ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ನೀಡಲಾಗುವುದು ಎಂದು ಸರ್ಕಾರ ಹೇಳಿದೆ.

# ಹುಟ್ಟುಹಬ್ಬದ ದಿನ ಪ್ರತಿಯೊಬ್ಬರೂ ಗಿಡ ನೆಡುವ ಸಂಕಲ್ಪ ಮಾಡಿ

## ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಅರಿವು -ಗಿಡಗಳ ನಾಟಿ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಕೃಷ್ಣ ನಗರದ ಎಸ್ ಕೆ ಎಸ್ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ಹಾಸನ ವತಿಯಿಂದ ಇಂದು ವಿಶ್ವ ಪರಿಸರ ದಿವಸದ ಅಂಗವಾಗಿ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಅರಿವು ಹಾಗೂ ಗಿಡ ನಾಟಿ ಮಾಡುವುದರ ಮೂಲಕ ನಡೆಯಿತು.

ಕಾರ್ಯಕ್ರಮವನ್ನು ವಿದ್ಯುಕ್ತವಾಗಿ ಗಿಡಗಳಿಗೆ ನೀರು ಉಳಿಸುವುದರ ಮುಖಾಂತರ ಚಾಲನೆ ನೀಡಿದ ತಾಲ್ಲೂಕು ಯೋಜನಾಧಿಕಾರಿ ಧನಂಜಯ ಅವರು ಮಾತನಾಡಿ, ಕಳೆದ 35 ವರ್ಷಗಳಿಂದ ಕ್ಷೇತ್ರದ ಕಡೆಯಿಂದ ಕರ್ನಾಟಕದ್ಯಂತ ಪರಿಸರ ಪೂರಕವಾಗಿ ಗಿಡ ನಾಟಿ ಮಾಡುವುದು ಪ್ಲಾಸ್ಟಿಕ್ ನಿರ್ಮೂಲನೆ ಕಾಡಂಚಿನಲ್ಲಿ ಹಣ್ಣು ಹಂಪಲ ಗಿಡಗಳ ನಾಟಿ ಸಾರ್ವಜನಿಕದ ಸ್ಥಳಗಳಲ್ಲಿ ಗಿಡ, ನಾಟಿ ಜೊತೆಗೆ ವರ್ಷಕ್ಕೆ ಎರಡು ಸಲ ಶ್ರದ್ಧಾ ಕೇಂದ್ರಗಳ ಸ್ವಚ್ಛತೆ ರೈತರ ಜಮೀನುಗಳಲ್ಲಿ ನೀರು ಇಂಗಲು ಕೃಷಿ ಹೊಂಡ ಹಾಗೂ ಮಣ್ಣಿನ ಸವಕಳಿಯನ್ನ ತಪ್ಪಿಸಲು ರೈತ ಮಿತ್ರ ಸಸಿಗಳ ನಾಟಿ ಮಾಡುತ್ತಾ ಬಂದಿದೆ. ಇಲ್ಲಿ ಭಾಗವಹಿಸಿರುವ ಎಲ್ಲಾ ವಿದ್ಯಾರ್ಥಿಗಳು ಮುಂದಿನ ದಿನಗಳಲ್ಲಿ ಅವರ ಹುಟ್ಟು ಹಬ್ಬದ ದಿನದಂದು ಒಂದೊಂದು ಗಿಡ ನೆಡುವ ಸಂಕಲ್ಪವನ್ನು ಮಾಡಬೇಕು ಹಾಗೆ ಪರಿಸರಕ್ಕೆ ಪೂರಕವಾಗಿ ಗಿಡ ನೆಡಲು ಎಲ್ಲಾ ವಿದ್ಯಾರ್ಥಿಗಳಿಗೆ ಗಿಡಗಳನ್ನು ವಿತರಣೆ ಮಾಡಿದರು.

ಶಾಲೆಯ ಟ್ರಸ್ಟಿ ಲೀಲಾ ಅವರು ಮಾತನಾಡಿ, ಸರ್ಕಾರ ಮಾಡುವ ಕೆಲಸಗಳನ್ನು ಧರ್ಮಸ್ಥಳ ಸಂಸ್ಥೆ ವತಿಯಿಂದ ಮಾಡುತ್ತಿರುವುದು ಸಾರ್ವಜನಿಕರ ವಲಯದಲ್ಲಿ ತುಂಬಾ ಅನುಕೂಲವಾಗುತ್ತಿದೆ. ಹಾಗೆಯೇ ಮಹಿಳೆಯರ ಸಬಲೀಕರಣ ಹಾಗೂ ಆರ್ಥಿಕ ಭದ್ರತೆ ಮೂಡಿಸುವಲ್ಲಿ ತುಂಬಾ ಕೆಲಸಗಳನ್ನು ಸಂಸ್ಥೆ ಮಾಡುತ್ತಿದೆ ಎಂದು ತಿಳಿಸಿದರು.

ಸಂಸ್ಥೆಯ ಚಂದ್ರಪ್ರಭ ಅವರು ಮಾತನಾಡಿ, ಪರಿಸರ ಪೂರಕವಾಗಿ ಈಗಾಗಲೇ ಸಾಮಾಜಿಕ ಅರಣ್ಯೀಕರಣ ದಡಿಯಲ್ಲಿ ಆಸಕ್ತ ರೈತರಿಗೆ ವಿವಿಧ ಗಿಡಗಳನ್ನು ಹಂಚಿಕೆ ಮಾಡುತ್ತಿದ್ದು ಹಾಗೂ ಶಾಲೆಗಳಲ್ಲಿ ವಿದ್ಯಾರ್ಥಿಗಳ ಮುಖಾಂತರ ಗಿಡ ನಾಟಿ ಮಾಡುವುದರ ಜೊತೆಗೆ ಅರಿವನ್ನು ಮೂಡಿಸುವ ಕಾರ್ಯಕ್ರಮ ಹಾಗೂ ಇತ್ತೀಚಿನ ದಿನಗಳಲ್ಲಿ ಅವಮಾನ ವೈಪರಿತ್ಯ ಪರಿಣಾಮವಾಗಿ ಕಾಲ ಕಾಲಕ್ಕೆ ಮಳೆ ಬೆಳೆಯಲ್ಲಿ ಕೊರತೆ ಉಂಟಾಗಿರುವುದರಿಂದ ಸಹಜ ಕೃಷಿ ಮತ್ತು ಸಾವಯವ ಕೃಷಿಯನ್ನು ಹೆಚ್ಚೆಚ್ಚು ಅನುಸರಿಸಿದರೆ ಪರಿಸರ ಪೂರಕವಾದ ವಾತಾವರಣ ನಿರ್ಮಾಣವಾಗುವುದರ ಜೊತೆಗೆ ಮುಂದಿನ ಪೀಳಿಗೆಗೆ ಹಸಿರುಯುಕ್ತ ಭೂಮಿಯನ್ನ ಬಳುವಳಿಯಾಗಿ ಕೊಡಲು ಸಹಕಾರಿಯಾಗುತ್ತದೆ ಇದರ ಜೊತೆಗೆ ಈಗಿನಿಂದಲೇ ವಿದ್ಯಾರ್ಥಿಗಳು ಪರಿಸರದ ಬಗ್ಗೆ ಪ್ರೀತಿಯನ್ನು ಬೆಳೆಸಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿ ನಗ್ಮಾ ಶಶಿಕಲಾ ಹಾಗೂ ಅಭಿಯಂತರ ರಾಕೇಶ್ ಹಾಗೂ ಎಲ್ಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಾದಕ ವ್ಯಸನ ಮುಕ್ತರಾಗಿ ದೇಶದ ಸತ್ಪ್ರಜೆಗಳಾಗಿ

• ಪ್ರಜೋದಯ ವರದಿ

**ಹಾಸನ:** ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ ಹಾಗೂ ಪಶು ವೈದ್ಯಕೀಯ ಮಹಾವಿದ್ಯಾಲಯ ಹಾಸನದ ಯುವ ರೆಡ್ ಕ್ರಾಸ್ ಘಟಕದ ಸಂಯುಕ್ತ ಆಶ್ರಯದಲ್ಲಿ ವಿಶ್ವ ತಂಬಾಕು ನಿಷೇಧ ದಿನಾಚರಣೆಯ ಅಂಗವಾಗಿ ''ಮಾದಕ ವ್ಯಸನ ಮುಕ್ತ ಅರಿವು ಹಾಗೂ ಕಾನೂನು ಪರಿಪಾಲನೆ'' ಕುರಿತು ವಿಶೇಷ ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನದ ಸಭಾಪತಿ ಹೆಮ್ಮಿಗೆ ಮೋಹನ್ ಅವರು, ರೆಡ್ ಕ್ರಾಸ್ ಸಂಸ್ಥೆಯು ಜಿಲ್ಲೆಯಲ್ಲಿ ವಿವಿಧ ಮಾನವೀಯ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದ್ದು, ವಿದ್ಯಾರ್ಥಿಗಳು ಇವುಗಳ ಸದುಪಯೋಗ ಪಡೆದು ಉತ್ತಮ ನಾಗರಿಕರಾಗಿ ದೇಶದ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಬೇಕು ಎಂದು ಅವರು ಕರೆ ನೀಡಿದರು.

ಕರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಗಂಗಾಧರ್, ಉಪ ಪೊಲೀಸ್ ಅಧೀಕ್ಷಕರು, ಮಾದಕ ವ್ಯಸನದಿಂದ ಉಂಟಾಗುವ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರಲ್ಲದೆ, ತಮ್ಮ ಸೇವಾ ಅವಧಿಯಲ್ಲಿ ಕಂಡ ನೈಜ ಘಟನೆಗಳನ್ನು ಉದಾಹರಿಸಿ, ವ್ಯಸನದಿಂದ ಮುಕ್ತಿ ಪಡೆಯುವ ಮಾರ್ಗಗಳು ಹಾಗೂ ಕಾನೂನು ಉಲ್ಲಂಘನೆ ಪ್ರಕರಣಗಳಲ್ಲಿ ಸಿಲುಕಿದಾಗ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಅನುಭವಿಸುವ ಸಂಕಷ್ಟಗಳ ಬಗ್ಗೆ ವಿವರಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಮತಾ ಜೆ. ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವಜನತೆ ಹಾಗೂ ವಿದ್ಯಾರ್ಥಿಗಳಲ್ಲಿ ತಂಬಾಕು ಸೇವನೆ ಹೆಚ್ಚಾಗುತ್ತಿದ್ದು, ಇದು ಕ್ಯಾನ್ಸರ್ ಸೇರಿದಂತೆ ಅನೇಕ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತಿದೆ ಎಂದು ತಿಳಿಸಿದರು.

ನಂತರ ರೆಡ್ ಕ್ರಾಸ್ ಸಂಸ್ಥೆಯ ನರ್ದೇಶಕರಾದ ಬಿ.ಆರ್.ಉದಯ್ ಕುಮಾರ್ ಹಾಗೂ ಡಾ. ರಂಗಲಕ್ಷ್ಮಿ ಅವರು ಮಾತನಾಡಿ, ರೆಡ್ ಕ್ರಾಸ್ ಸಂಸ್ಥೆಯು ಜಿಲ್ಲೆಯಾದ್ಯಂತ ವಿವಿಧ ಮಾನವೀಯ ಸೇವಾ ಕರ್ಯಗಳು ಹಾಗೂ ವಿದ್ಯಾರ್ಥಿಗಳು ಮತ್ತು ಸರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿದೆ ಎಂದು ತಿಳಿಸಿದರು.

ಬಾಲಸುಬ್ರಹ್ಮಣ್ಯ, ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ಮಮತಾ ಪಾಟೀಲ್, ಶಬ್ಬೀರ್ ಅಹ್ಮದ್, ಡಾ. ಹೇಮಂತ್‌ಗೌಡ, ಕಾಲೇಜಿನ ಬೋಧಕ ವರ್ಗ, ವಿದ್ಯಾರ್ಥಿಗಳು ಇದ್ದರು.

# ಮತದಾರರು ತಪ್ಪದೇ ನೋಂದಣಿ ದೃಢೀಕರಿಸಿಕೊಳ್ಳಿ

## ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ

• ಪ್ರಜೋದಯ ವರದಿ

**ಆಲೂರು:** ಮತದಾರರ ಮ್ಯಾಪಿಂಗ್ ಮಾಡುವ ಸಂದರ್ಭದಲ್ಲಿ ಮತದಾರರು ತಪ್ಪದೆ ತಮ್ಮ ನೊಂದಣಿಯನ್ನು ದೃಢೀಕರಿಸಿಕೊಳ್ಳಬೇಕು. ಇಲ್ಲದಿದ್ದರೆ ಮತದಾರರ ಪಟ್ಟಿಯಿಂದ ಹೊರಗುಳಿಯುತ್ತೀರಿ ಎಂದು ಸಕಲೇಶಪುರ ಉಪ ವಿಭಾಗಾಧಿಕಾರಿ ಹುಲ್ಲುಮನಿ ಅವರು ತಿಮ್ಮಣ್ಣ ತಿಳಿಸಿದರು.

ಪಟ್ಟಣದ ಮಿನಿ ವಿದಾನಸೌಧ ಸಭಾಂಗಣದಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಏರ್ಪಡಿಸಿದ್ದ ಸಭೆಯಲ್ಲಿ ಮಾತನಾಡಿ, ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ಆರಂಭವಾಗಿದೆ. ರಾಜಕೀಯ ಪಕ್ಷಗಳ ಸಭೆಗಳು, ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳು ಈಗಾಗಲೇ ನಡೆಯುತ್ತಿವೆ ಎಂದು ತಿಳಿಸಿದರು.

ಆಲೂರು ತಾಲ್ಲೂಕಿನಲ್ಲಿ ಒಟ್ಟು 72060 ಮತದಾರರಿದ್ದು, 35.785 ಪುರುಷರು, 36.274 ಮಹಿಳೆಯರಿದ್ದಾರೆ. ಮತದಾರರ ಪ

# ಪ್ರಧಾನಿ ಮೋದಿ ಹಾಡಿ ಹೊಗಳಿದ ಟ್ರಂಪ್

## ಶೀಘ್ರದಲ್ಲೇ ವ್ಯಾಪಾರ ಒಪ್ಪಂದ | ಸುಂಕ ಹೇರಿಕೆಯ ವಿಚಾರ ಪ್ರಸ್ತಾಪ

• ಪ್ರಜೋದಯ ವರದಿ

**ವಾಷಿಂಗ್ಟನ್:** ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಅತ್ಯುತ್ತಮ ಸ್ನೇಹಿತ ಎಂದು ಬಣ್ಣಿಸಿದ್ದಾರೆ. ಜೊತೆಗೆ, ಭಾರತ ಮತ್ತು ಅಮೇರಿಕಾ ಶೀಘ್ರದಲ್ಲೇ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಓವಲ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು (ಭಾರತ-ಅಮೇರಿಕಾ) ಒಂದು ಒಪ್ಪಂದಕ್ಕೆ ಬರಲಿದ್ದೇವೆ. ಏಕೆಂದರೆ ನನಗೆ ಪ್ರಧಾನಿ ಮೋದಿ ಅವರೆಂದರೆ ತುಂಬಾ ಇಷ್ಟ. ಅವರು ನನ್ನ ಅತ್ಯುತ್ತಮ ಸ್ನೇಹಿತ. ನಮ್ಮಿಬ್ಬರ ನಡುವೆ ಉತ್ತಮ ಬಾಂಧವ್ಯವಿದೆ ಮತ್ತು ನಾವು ಖಂಡಿತವಾಗಿಯೂ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿದ್ದೇವೆಂದು ಹೇಳಿದ್ದಾರೆ. ಉಭಯ ದೇಶಗಳ ನಡುವೆ ನಡೆ ಯುತ್ತಿರುವ ವ್ಯಾಪಾರ ಒಪ್ಪಂದದ ಮಾತುಕತೆ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಭಾರತವು ಹಲವು ವರ್ಷಗಳಿಂದ ಅಮೇರಿಕಾದ ನೀತಿಗಳ ಲಾಭ ಪಡೆದು ಕೊಂಡಿದೆ. ಅದೇ ರೀತಿ ನಮ್ಮ ದೇಶದಿಂದ ಭಾರತಕ್ಕೆ ರಫ್ತಾಗುವ ಸರಕುಗಳಿಗೆ ಭಾರೀ ಪ್ರಮಾಣದ ಸುಂಕವನ್ನು ವಿಧಿಸಿದೆ ಎಂದಿದ್ದಾರೆ.

ಭಾರತವು ನಮ್ಮ ಕಂಪನಿಗಳ ಮೇಲೆ ಭಾರೀ ಪ್ರಮಾಣದ ಸುಂಕ ವಿಧಿಸಿದೆ. ಆದರೆ, ನಾವು ಭಾರತದಿಂದ ಯಾವುದೇ ಸುಂಕವನ್ನು ವಸೂಲಿ ಮಾಡಲಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ. ಅದಕ್ಕೆ ಸಂಬಂಧಿಸಿ ಹಾರ್ಲೆ ಡೇವಿಡ್ಸನ್ ಬೈಕ್ ವ್ಯಾಪಾರದ ಉದಾಹರಣೆಯನ್ನು ಅವರು ನೀಡಿದ್ದಾರೆ. ಭಾರತದಲ್ಲಿ ನಾವು ಹಾರ್ಲೆ ಡೇವಿಡ್ಸನ್ ಬೈಕ್‌ಗಳನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ.

ಏಕೆಂದರೆ, ಈ ದ್ವಿಚಕ್ರ ವಾಹನಗಳ ಮೇಲೆ ಭಾರತ ಶೇ.200ರಷ್ಟು ತೆರಿಗೆ ವಿಧಿಸುತ್ತಿತ್ತು. ಪರಿಣಾಮ ಏನಾಯಿತೆಂದರೆ, ನಾವೇ ಭಾರತಕ್ಕೆ ಹೋಗಿ ಹಾರ್ಲೆ ಡೇವಿಡ್ಸನ್‌ನ ಘಟಕ ಆರಂಭಿಸಬೇಕಾಯಿತು. ಹಾಗೆ ನಡೆದಿರುವುದು ದುರದೃಷ್ಟಕರ. ಅದೆಲ್ಲವೂ ನಾನು ಅಧಿಕಾರಕ್ಕೆ ಬರುವ ಮೊದಲು ನಡೆದಿತ್ತು ಎಂದಿದ್ದಾರೆ.

ಅದನ್ನು ಅಮೇರಿಕಾದ ಸುಂಕ ನೀತಿಗಳೊಂದಿಗೆ ಹೋಲಿಸಿದ ಟ್ರಂಪ್, ಭಾರತದ ಬೈಕ್ ಕಂಪನಿಗಳು ನಮ್ಮ(ಅಮೇರಿಕಾದ)ಮಾರುಕಟ್ಟೆಯಲ್ಲಿ ಯಾವುದೇ ಅಡೆತಡೆಗಳನ್ನು ಎದುರಿಸಿಲ್ಲ, ಭಾರತ ನಮ್ಮ ದೇಶದಲ್ಲೂ ಬೈಕ್‌ಗಳನ್ನು ಮಾರಾಟ ಮಾಡುತ್ತಿದೆ. ನಾವು ಭಾರತಕ್ಕೆ ಎಷ್ಟು ಸುಂಕ ವಿಧಿಸಿದ್ದೇವೆ ಗೊತ್ತಾ, ಏನೂ ಇಲ್ಲ, ಆದರೆ, ಈಗ ಪರಿಸ್ಥಿತಿ ತದ್ವಿರುದ್ಧ ವಾಗಿದೆ. ನಾವು ಭಾರತದೊಂದಿಗೆ ಸಾಕಷ್ಟು ಹಣವನ್ನುಗಳಿಸುತ್ತಿದ್ದೇವೆಂದು ತಿಳಿಸಿದ್ದಾರೆ.

ಅಮೇರಿಕಾದ ನಿಯೋಗವೊಂದು ಈ ವಾರದ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡಿದ್ದು, ತಾತ್ಕಾಲಿಕ ದ್ವಿಪಕ್ಷೀಯ ಒಪ್ಪಂದದ ಮಾತುಕತೆಗಳನ್ನು ಪೂರ್ಣಗೊಳಿಸಿದೆ ಎಂದು ವರದಿಯಾಗಿದೆ. ದ್ವಿಪಕ್ಷೀಯ ವ್ಯಾಪಾರ ಮತ್ತು ಆರ್ಥಿಕ ಸಂಬಂಧವನ್ನು ಬಲಪಡಿಸುವ ಸಲುವಾಗಿ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಲು ಉಭಯ ದೇಶಗಳು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿವೆ.

**ಭಾರತ-ಅಮೇರಿಕಾ ಜಂಟಿ ಹೇಳಿಕೆ**

ಫೆಬ್ರುವರಿ 7ರಂದು ಟ್ರಂಪ್ ಮತ್ತು ಮೋದಿ ನಡುವೆ ನಡೆದ ದೂರವಾಣಿ ಸಂಭಾಷಣೆಯ ಬಳಿಕ ಭಾರತ ಮತ್ತು ಅಮೇರಿಕಾ ಜಂಟಿ ಹೇಳಿಕೆ ಯೊಂದನ್ನು ಬಿಡು ಗಡೆ ಮಾಡಿದ್ದವು. ಅದರಲ್ಲಿ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಮೊದಲ ಹಂತದ ಅಥವಾ ತಾತ್ಕಾಲಿಕ ವ್ಯಾಪಾರ ಒಪ್ಪಂದದ ಚೌಕಟ್ಟನ್ನು ಅಂತಿಮಗೊಳಿಸಲಾಗಿತ್ತು. ಒಪ್ಪಂದದ ಭಾಗವಾಗಿ ಭಾರತದ ಸರಕುಗಳ ಮೇಲೆ ವಿಧಿಸುತ್ತಿದ್ದ ಸುಂಕ ವನ್ನು ಶೇ.50ರಿಂದ ಶೇ.18ಕ್ಕೆ ಇಳಿಸಲು ಅಮೇರಿಕಾ ಒಪ್ಪಿಕೊಂಡಿತ್ತು. ರಷ್ಯಾ ತೈಲವನ್ನು ಖರೀದಿ ಸಿದ್ದಕ್ಕಾಗಿ ಭಾರತದ ಸರಕುಗಳ ಮೇಲೆ ವಿಧಿಸಲಾಗಿದ್ದ ಶೇ.25ರಷ್ಟು ಸುಂಕವನ್ನೂ ತೆಗೆದುಹಾಕಿತ್ತು. ಆದರೆ, ಫೆ.20ರಂದು ಅಮೇರಿಕಾದ ಸುಪ್ರೀಂ ಕೋರ್ಟ್, 1977ರ ಇಂಟರ್‌ನ್ಯಾಷನಲ್ ಎಮರ್ಜೆನ್ಸಿ ಎಕನಾಮಿಕ್ ಪವರ್ಸ್ ಆಕ್ಟ್ ಅಡಿಯಲ್ಲಿ ವಿಧಿಸಲಾ ಗಿದ್ದ ಟ್ರಂಪ್ ಅವರ ಸುಂಕದ ನಿರ್ಧಾರದ ವಿರುದ್ಧ ತೀರ್ಪು ನೀಡಿತ್ತು. ಇದಾದ ಬಳಿಕ ಟ್ರಂಪ್ ಅವರು ಫೆ.24ರಿಂದ ಜಾರಿಗೆ ಬರುವಂತೆ 150 ದಿನಗಳ ಅವಧಿಗೆ ಎಲ್ಲಾ ದೇಶಗಳ ಮೇಲೆ ಶೇ.10ರಷ್ಟು ಸುಂಕ ವಿಧಿಸುವುದಾಗಿ ಘೋಷಿಸಿದ್ದರು. ಸುಪ್ರೀಂ ಕೋರ್ಟ್ ಆದೇಶ ಮತ್ತು ನಂತರದ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ಕುರಿತಾದ ಮಾತುಕತೆಗಳು ಪುನರಾ ರಂಭಗೊಂಡಿವೆ.

## ಅಭಿವೃದ್ಧಿ ಹೆಸರಿನಲ್ಲಿ ಅರಣ್ಯಕ್ಕೆ ಭಾರೀ ಪೆಟ್ಟು

» ಮೊದಲನೇ ಪುಟದಿಂದ

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರಿಸರ ಸಂರಕ್ಷಣೆ ಮನೆಯ ಸ್ವಚ್ಛತೆಯಿಂದಲೇ ಆರಂಭವಾಗಬೇಕು. ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡುವ ಅಭ್ಯಾಸವನ್ನು ಪ್ರತಿ ಯೊಬ್ಬರೂ ರೂಢಿಸಿಕೊಳ್ಳ ಬೇಕು. ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಿ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿ ಕೊಳ್ಳುವುದು ಇಂದಿನ ಅಗತ್ಯವಾಗಿದೆ. ಮುಂದಿನ ಪೀಳಿಗೆಗೆ ಹಸಿರು ಮತ್ತು ಆರೋಗ್ಯಕರ ಪರಿಸರ ವನ್ನು ಕೊಡುಗೆಯಾಗಿ ನೀಡಲು ಎಲ್ಲರೂ ಕೈಜೋಡಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿ ಆರ್. ಭಾಸ್ಕರ್, ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿ. ಕೆ.ದಾಕ್ಷಾಯಿಣಿ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್, ಡಿವೈಎಸ್ಪಿ ಪರಶುರಾಮ್ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು, ವಿದ್ಯಾರ್ಥಿಗಳು, ಪರಿಸರ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಚಿರತೆ ದಾಳಿಯಿಂದ ಐವರಿಗೆ ಗಾಯ

» ಮೊದಲನೇ ಪುಟದಿಂದ

ನಾಗೇಶ್ ಅವರಿಗೆ ಗಂಭೀರ ಏಟಾಗಿದೆ. ಚಿರತೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆಯ ಏಳು ತಂಡಗಳು ನಿರಂತರ ಕಾರ್ಯಾಚರಣೆ ನಡೆಸಿವೆ. ಚಿರತೆ ಗಾಬರಿ ಸ್ಥಿತಿಯಲ್ಲಿ ಸಿಕ್ಕ ಸಿಕ್ಕವರ ಮೇಲೆ ದಾಳಿ ನಡೆಸಿದೆ. ಈ ಹಿಂದೆ ಚಿರತೆ ಸಂಚಾರದ ಮಾಹಿತಿ ಹಿನ್ನಲೆಯಲ್ಲಿ ಬೋನುಗಳನ್ನು ಅಳವಡಿಸಲಾಗಿತ್ತು. ಆದರೂ ಶುಕ್ರವಾರ ಹೊಲದ ಕೆಲಸಕ್ಕೆ ತೆರಳಿದ್ದ ರೈತರ ಮೇಲೆ ದಾಳಿ ನಡೆಸಿರುವುದು ಆತಂಕ ಹೆಚ್ಚಿಸಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಅಂಕನಹಳ್ಳಿ ಗ್ರಾಮದ ಹೊಲ ದಲ್ಲಿ ಕೆಲಸ ಮಾಡುತ್ತಿದ್ದ ನಾಗೇಶ್ ಹಾಗು ನವೀನ್ ಮೇಲೆ ಮೊದಲು ಚಿರತೆ ದಾಳಿ ನಡೆಸಿದೆ. ಬಳಿಕ ಇನ್ನಿಬ್ಬರ ಮೇಲೂ ದಾಳಿ ನಡೆಸಿದ್ದು, ಅದೃಷ್ಟವಶಾತ್ ಯಾವುದೇ ಜೀವಹಾನಿ ಸಂಭವಿಸಿಲ್ಲ ಎಂದು ತಿಳಿಸಿದರು.

ಗಾಯಾಳುಗಳಿಗೆ ತಕ್ಷಣ ಚಿಕಿತ್ಸೆ ಒದಗಿಸಲಾಗಿದ್ದು, ಎಲ್ಲರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಘಟನೆ ಮರುಕಳಿಸದಂತೆ ಅರಣ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದ್ದು, ಸಾರ್ವಜನಿಕರು ಒಂಟಿಯಾಗಿ ಹೊಲ-ಗದ್ದೆಗಳಿಗೆ ತೆರಳದಂತೆ ಹಾಗು ಅರಣ್ಯ ಇಲಾಖೆಯ ಸೂಚನೆಗಳನ್ನು ಪಾಲಿಸುವಂತೆ ಮನವಿ ಮಾಡಿದರು.

## ಜ್ಞಾನ ಸಂಪಾದನೆ ಯುವಜನತೆಯ ಸಮೃದ್ಧಿಗೆ ಅಡಿಪಾಯ

» ಮೊದಲನೇ ಪುಟದಿಂದ

ಈ ಎರಡೂ ಕಾರ್ಯಗಳು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅತ್ಯಗತ್ಯವಾದ ಅಂಶಗಳಾಗಿವೆ. ಜಿಲ್ಲೆಯ ಅಭಿವೃದ್ಧಿಗೆ ಪೂರಕವಾಗಿರುವ ಇಂತಹ ಜನಪರ ಕಾರ್ಯಕ್ರಮ ಗಳನ್ನು ಯಶಸ್ವಿಯಾಗಿ ಆಯೋಜಿಸಿದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಗ್ರಂಥಾಲಯ ಇಲಾಖೆ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಪ್ರಕೃತಿಯೊಂದಿಗೆ ನಮ್ಮ ಬದುಕಿನ ನಂಟು ಅವಿನಾಭಾವವಾಗಿದೆ. ಪರಿಸರವನ್ನು ಉಳಿಸುವುದು ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯವೂ ಆಗಿದೆ. ನಾವು ನೆಡುವ ಒಂದು ಗಿಡ ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೆರಳು ಮತ್ತು ಆರೋಗ್ಯಕರ ಬದುಕಿನ ಅಮೂಲ್ಯ ಕೊಡುಗೆಯಾಗಲಿದೆ. ಹಸಿರು ಹಾಸನ ನಿರ್ಮಾಣದ ಗುರಿಯೊಂದಿಗೆ ಜಿಲ್ಲೆಯಾದ್ಯಂತ ನಡೆಯುತ್ತಿರುವ ಈ ಅಭಿಯಾನ ಜನರಲ್ಲಿ ಪರಿಸರ ಜಾಗೃತಿ ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ತಹಶೀಲ್ದಾರ್ ಗೀತಾ, ಸಮಾಜ ಕಲ್ಯಾಣಾ ಇಲಾಖೆ ಉಪನಿರ್ದೇಶಕ ದೂದ್‌ಪೀರ್ ಇದ್ದರು.

## ಸ್ಮಾರ್ಟ್ ಬಾರ್ಡರ್ ಯೋಜನೆ ಶೀಘ್ರ ಜಾರಿ

**ತ್ರಿಪುರಾ:** ಭಾರತದ ಗಡಿ ಸುರಕ್ಷತೆಯನ್ನು ಮತ್ತಷ್ಟು ಬಲಿಷ್ಠಗೊಳಿಸಲು ಕೇಂದ್ರ ಸರ್ಕಾರದ ಸ್ಮಾರ್ಟ್ ಬಾರ್ಡರ್ ಯೋಜನೆಯು ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲೇ ಜಾರಿಗೊಳಿಸಲಾಗುವುದೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಹೇಳಿದ್ದಾರೆ.

ತ್ರಿಪುರಾದ ಲಂಕಾಮುರಾ ಬಾರ್ಡರ್ ಔಟ್‌ಪೋಸ್ಟ್‌ನಲ್ಲಿ ಬಿಎಸ್‌ಎಫ್ ಸಿಬ್ಬಂದಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಭದ್ರತಾ ಪಡೆಗಳನ್ನು ನಿಯೋಜಿಸಿದಲ್ಲೆಲ್ಲಾ ನಾವು ಸ್ಮಾರ್ಟ್ ಗಡಿಗಳನ್ನು ನಿರ್ಮಿಸುತ್ತೇವೆ. ಸ್ಮಾರ್ಟ್ ಬಾರ್ಡರ್ ಯೋಜನೆಯು ಹೊಸ ಭದ್ರತಾ ಗ್ರಿಡ್, ಅತ್ಯಾಧುನಿಕ ತಂತ್ರಜ್ಞಾನ, ಸ್ಥಳೀಯ ಆಡಳಿತ ಮತ್ತು ಗಡಿ ಕಾವಲು ಗಾರರನ್ನು ಒಳಗೊಂಡಿರುತ್ತದೆ ಎಂದರು.

ಅತ್ಯಾಧುನಿಕ ತಂತ್ರಜ್ಞಾನ, ಸ್ಥಳೀಯ ಆಡಳಿತ ಮತ್ತು ಗಡಿ ಕಾವಲುಗಾರರನ್ನು ಒಳ ಗೊಂಡ ಹೊಸ ಭದ್ರತಾ ಗ್ರಿಡ್ ನೊಂದಿಗೆ ಸ್ಮಾರ್ಟ್ ಗಡಿಗಳನ್ನು ಶೀಘ್ರದಲ್ಲೇ ಪರಿಚಯಿಸಲಾಗುವುದು. ಸ್ಮಾರ್ಟ್ ಗಡಿಯ ಪರಿಕಲ್ಪನೆಯನ್ನು ದೇಶದ ಏಳರಿಂದ ಎಂಟು ಸ್ಥಳಗಳಲ್ಲಿ ಪ್ರಾಯೋಗಿಕ ಯೋಜನೆಯಾಗಿ ಜಾರಿಗೆ ತರಲಾಗುವುದು. ಈ ಸಂಬಂಧ ಕೇಂದ್ರ ಗೃಹ ಕಾರ್ಯದರ್ಶಿ ಮತ್ತು ಬಿಎಸ್‌ಎಫ್ ಮಹಾನಿರ್ದೇಶಕರು ಗಡಿ ಪ್ರದೇಶಗಳಿಗೆ ಭೇಟಿ ನೀಡಿ ಮಾತುಕತೆ ನಡೆಸಬೇಕೆಂದು ನಾನು ವಿನಂತಿಸುತ್ತೇನೆ ಎಂದರು.

# ಪರಿಸರ ಅರಿವು ಮೂಡಿಸಲು ಮಕ್ಕಳ ಪ್ರವಾಸ

• ಪ್ರಜೋದಯ ವರದಿ

**ಹಾಸನ:** ನಗರದ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ವಿಶ್ವ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪ್ರಸ್ತುತ ದಿನಗಳಲ್ಲಿ ಪರಿಸರ ಮಾಲಿನ್ಯ, ಅರಣ್ಯನಾಶ, ಪ್ಲಾಸ್ಟಿಕ್ ಬಳಕೆಯ ಹೆಚ್ಚಳದಿಂದ ಪ್ರಕೃತಿ ಮೇಲೆ ಉಂಟಾಗುತ್ತಿರುವ ದುಷ್ಪರಿ ಣಾಮಗಳ ಬಗ್ಗೆ ಮಕ್ಕಳಿಗೆ ತಿಳವಳಿಕೆ ನೀಡಲಾಯಿತು. ವಿದ್ಯಾರ್ಥಿಗಳನ್ನು ಪ್ರಕೃತಿಯ ಮಡಿಲಲ್ಲಿರುವ ರಮಣೀಯ, ಐತಿಹಾಸಿಕ ಹಾಗು ಪ್ರೇಕ್ಷಣೀಯ ಸ್ಥಳಕ್ಕೆ ಕರೆದುಕೊಂಡು ಹೋಗಿ ಪ್ರಾತ್ಯಕ್ಷಿಕೆ ಮೂಲಕ ಪ್ರಕೃತಿಯ ಮಹತ್ವ ಹೇಳಿ ಕೊಡಲಾಯಿತು. ಶಿಕ್ಷಕರು ವಿದ್ಯಾರ್ಥಿಗಳಿಗೆ ಗಿಡಮರಗಳನ್ನು ನೆಡುವುದರಿಂದ ಮಾನವ ಜೀವನಕ್ಕೆ ಆಗುವ ಪ್ರಯೋಜನಗಳ ಬಗ್ಗೆ ವಿವರಿಸಿದರು. ಮರಗಳು ಮಳೆಯಾಗಲು ಸಹಕಾರಿ, ಶುದ್ಧವಾದ ಗಾಳಿಯನ್ನು ನೀಡುತ್ತವೆ, ಪರಿಸರ ಸಮತೋಲನವನ್ನು ಕಾಪಾಡುವವು ಎಂಬುದನ್ನು ತಿಳಿಸಲಾಯಿತು. ಜೊತೆಗೆ ಪ್ಲಾಸ್ಟಿಕ್ ಬಳಕೆಯಿಂದ ಭೂಮಿ, ನೀರು ಮತ್ತು ಪ್ರಾಣಿಗಳಿಗೆ ಆಗುವ ಹಾನಿ ಕುರಿತು



ಜಾಗೃತಿ ಮೂಡಿಸಲಾಯಿತು. ಅರಣ್ಯ ನಾಶದಿಂದ ಉಂಟಾಗುವ ಜಲಕ್ಷಾಮ, ವಾಯುಮಾಲಿನ್ಯ, ತಾಪಮಾನ ಏರಿಕೆ ಮತ್ತು ಪರಿಸರ ಅಸಮತೋಲನ ದಂತಹ ಸಮಸ್ಯೆಗಳ ಬಗ್ಗೆ ಮಕ್ಕಳಿಗೆ ಉದಾಹರಣೆಗಳೊಂದಿಗೆ ತಿಳಿಸಲಾಯಿತು.

ಶಾಲೆಯ ಆಡಳಿತಾಧಿಕಾರಿ ಡಾ. ಹೆಚ್.ಎನ್.ಚಂದ್ರಶೇಖರ್ ಅವರು ಮಾತ ನಾಡಿ, ಪ್ರತಿ ವಿದ್ಯಾರ್ಥಿಯೂ ಕನಿಷ್ಟ ಒಂದೊಂದು ಸಸಿಯನ್ನು ನೆಟ್ಟು ಅದನ್ನು ಸಾಕಿ ಸಲಹಬೇಕು. ಪ್ರಕೃತಿ ಪ್ರೇಮಿಯಾಗಿ ಲಕ್ಷಾಂತರ ಮರಗಳನ್ನು ನೆಟ್ಟು ದೇಶಕ್ಕೆ ಮಾದರಿಯಾದ ಸಾಲುಮರದ ತಿಮ್ಮಕ್ಕ ಅವರ ಸೇವೆಯನ್ನು ಸ್ಮರಿಸಿ, ಅವರ ಜೀವನವು ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಬೇಕೆಂದರು. ವಿದ್ಯಾರ್ಥಿಗಳು ಸಹ ಪರಿಸರ ಸಂರಕ್ಷಣೆಯ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

# ಪರಿಸರ ರಕ್ಷಿಸದಿದ್ದರೆ ಅಪಾಯ: ಶಾಸಕ ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪರಿಸರ ಸಮ ತೋಲನ ಕಾಪಾಡದಿದ್ದರೆ ಮುಂದಿನ ಪೀಳಿಗೆಯು ಅನೇಕ ನೈಸರ್ಗಿಕ ಅಪಾಯ ಎದುರಿಸಬೇಕಾಗುತ್ತದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಎಚ್ಚರಿಸಿದರು.

ಪಟ್ಟಣದ ಬೆಲಸಿಂದ ಪ್ರಕೃತಿ ವನ ದಲ್ಲಿ ಕರ್ನಾಟಕ ಅರಣ್ಯ ಇಲಾಖೆ, ಸಾಮಾಜಿಕ ಹಾಗೂ ಪ್ರಾದೇಶಿಕ ವಲಯ ಅರಣ್ಯ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಮತ್ತು ಭೂಮಿ ಉಳಿಸಿ ಆಂದೋಲನ ಸಮಿತಿ ವತಿಯಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಿಯಾವಾಕಿ ಮಾದರಿ ಕಾಡು ಬೆಳೆಸುವ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರ ಸಮತೋಲ ಸ್ಥಿತಿ ಯಲ್ಲಿದ್ದರೆ ಕಾಲಕಾಲಕ್ಕೆ ಮಳೆಯಾ ಗುತ್ತಿದೆ. ಮಳೆಯಾದರೆ ಸಕಲ ಜೀವ ರಾಶಿಗಳಿಗೂ ಕುಡಿಯಲು ನೀರು ಮತ್ತು ಆಹಾರ ಸಿಗುತ್ತದೆ. ಇಲ್ಲದಿದ್ದರೆ ಕಾಡುವಾಸಿ ಪ್ರಾಣಿಗಳು ನಾಡಿಗೆ ದಾಳಿ ಇಡುತ್ತವೆ. ಆಹಾರ ಮತ್ತು ನೀರು ಸಿಗದೇ ಸಾವನ್ನಪ್ಪುತ್ತವೆ. ಇತ್ತೀಚೆಗೆ ಆನೆಗಳು ಜನವಸತಿ ಪ್ರದೇಶಗಳತ್ತಾ ಆಗಮಿಸಿ ಹಲವು ತೊಂದರೆಗಳನ್ನು ಮನುಷ್ಯನಿಗೆ ನೀಡುತ್ತಿರುವುದು ಪರಿಸರ ನಾಶದ ದುಷ್ಪರಿಣಾಮದ ಒಂದು ಉದಾಹರ ಣೆಯಾಗಿದೆ ಎಂದು ಹೇಳಿದರು.

ಹಾಗಾಗಿ ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದ ಪರಿಸರ ಉಳಿಸು ವುದು ಕೇವಲ ಅರಣ್ಯ ಇಲಾಖೆ ಜವಾಬ್ದಾರಿಯಲ್ಲ, ಇಡೀ ಸಮುದಾಯದ ಜವಾಬ್ದಾರಿಯಾಗಿದೆ. ಪರಿಸರ ದಿನಾಚರಣೆ ಎಂದರೆ ಕೇವಲ ಅಂದು ಸಸಿ ನೆಡುವುದಲ್ಲ ನೆಟ್ಟ ಸಸಿಯನ್ನು ವರ್ಷದುದ್ದಕ್ಕೂ ಸಂರಕ್ಷಿಸುವ ಅದಕ್ಕೆ ನೀರುಣಿಸುವ ಪೋಷಿಸುವ ಕಾರ್ಯ ಆಗಬೇಕು ಎಂದರು.

ಮನೆಯಂಗಳದಲ್ಲಿ, ಹೊಲ ಗದ್ದೆಗಳ ಬದುವಿನಲ್ಲಿ ಸಸಿಗಳನ್ನು ನೆಟ್ಟು ಅವುಗಳ ಬೆಳವಣಿಗೆಯ ಬಗ್ಗೆ ನಿಗಾ ವಹಿಸಬೇಕು. ಪರಿಸರ ಸಂರಕ್ಷಣೆ -ನಮ್ಮೆಲ್ಲರ ಹೊಣೆ ಎನ್ನುವುದು ಕೇವಲ ಘೋಷಣೆಯಲ್ಲ, ಬದಲಿಗೆ ಆರೋಗ್ಯಕರ ಭವಿಷ್ಯಕ್ಕಾಗಿ ಪ್ರತಿ ಯೊಬ್ಬರೂ ಪಾಲಿಸಬೇಕಾದ ಮೂಲಭೂತ ಕರ್ತವ್ಯ. ದಿನೇ ದಿನೇ ಹೆಚ್ಚುತ್ತಿರುವ ಭೂಮಿಯ ತಾಪಮಾನ ವನ್ನು ಕಡಿಮೆ ಮಾಡಲು ಹಾಗೂ ಹಸಿರನ್ನು ಹೆಚ್ಚಿಸಿ ಶುದ್